ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ದಕ್ಷಿಣ ಆಫ್ರಿಕಾ ವಿರುದ್ಧದ ಸರಣಿಯ 5ನೇ ಪಂದ್ಯದಲ್ಲಿ ಆಲ್ ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಟಿ-20 ಕ್ರಿಕೆಟ್‌ನಲ್ಲಿ ಭಾರತದ ಪರ (16ಕ್ಕೆ 54)2ನೇ ಅತಿವೇಗದ ಅರ್ಧಶತಕ ಸಿಡಿಸಿದ್ದಾರೆ.

20 ಡಿಸೆಂಬರ್ 2025 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 278 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ವಾಂಟರ್ಕೆ ಎಂಬ ಜೀವಿ ಗೊತ್ತೇ ನಿಮಗೆ! » 2

ಅಜ್ಞಾನಿಯಾದವನು ಎಂದಿಗೂ ಯಶಸ್ಸಿನ ಶಿಖರ ತಲುಪಲ್ಲ » 3

ಸರ್ಕಾರಿ ಆಸ್ಪತ್ರೆಯ ಉಪಕರಣಗಳು ಮಾಯ » 4

ಹೈಕಮಾಂಡ್ ಆಯ್ಕೆ: ನಾನೇ ಪೂರ್ಣಾವಧಿ ಸಿಎಂ

ಅಧಿವೇಶನ ಕೊನೇ ದಿನ ಕುರ್ಚಿ ಕದನಕ್ಕೆ ತೆರೆ ಎಳೆದ ಮುಖ್ಯಮಂತ್ರಿ | 5 ವರ್ಷ ಸಿದ್ದರಾಮಯ್ಯ ಇರುವುದಿಲ್ಲವೆಂದು ನಾನು ಹೇಳಿಲ್ಲ: ಡಿಕೆಶಿ

• ಪ್ರಜೋದಯ ವರದಿ

ಬೆಂಗಳೂರು: ಹೈಕಮಾಂಡ್ ಐದು ವರ್ಷಕ್ಕೆ ಮುಖ್ಯಮಂತ್ರಿಯಾಗಿ ನನ್ನನ್ನೇ ಆಯ್ಕೆ ಮಾಡಿದೆ. ನನ್ನ ಮತ್ತು ಡಿ.ಕೆ. ಶಿವಕುಮಾರ್ ನಡುವೆ ಎರಡೂವರೆ ವರ್ಷ ಅಧಿಕಾರ ಹಂಚಿಕೆ ಯಾವುದೇ ಒಪ್ಪಂದವಾಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಳಿಗಾಲ ಅಧಿವೇಶನದ ಕೊನೆಯ ದಿನ ಕುರ್ಚಿ ಕದನಕ್ಕೆ ತೆರೆ ಎಳೆಯಲು ಯತ್ನಿಸಿದರು.

ಅಧಿವೇಶನದ ಕೊನೆಯ ದಿನವಾದ ಶುಕ್ರವಾರ ಸದನದಲ್ಲಿ ಮಾತನಾಡಿದ ಅವರು, ಸುಗಮ ಕಲಾಪಕ್ಕೆ ಸಹಕಾರ ಕೊಟ್ಟಿದ್ದಕ್ಕೆ ಧನ್ಯವಾದ ಹೇಳಿದರು. ಈ ವೇಳೆ ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡಪಾಟೀಲ ಯತ್ನಾಳ್ ಅವರು ಸಿಎಂ ಕುರ್ಚಿ ಕಾಳಗದ ಬಗ್ಗೆ ಪ್ರಸ್ತಾಪಿಸಿದಾಗ ತಮ್ಮದೇ ಧಾಟಿಯಲ್ಲಿಯೇ ಉತ್ತರಿಸಿ, ನನಗೆ ರಾಜಕೀಯ ನಿಶಕ್ತಿ ಯಾವಾಗಲೂ ಇಲ್ಲ. ರಾಜಕೀಯವನ್ನು ಅಷ್ಟೊಂದು ತಲೆ ಕೆಡೆಸಿಕೊಳ್ಳುವ ಅವಶ್ಯಕತೆಯೂ ಇಲ್ಲ, ಜನರು ಆಶೀರ್ವಾದ ಮಾಡಿದರೆ ಮಾತ್ರ ಅಧಿಕಾರಕ್ಕೆ ಬರೋದು. ಅಂತಿಮವಾಗಿ ಪ್ರಜಾ ಪ್ರಭುತ್ವದಲ್ಲಿ ಮತದಾರ ಪ್ರಭುಗಳು ತಾನೇ ರಾಜಕೀಯ ಶಕ್ತಿ ನಿರ್ಧಾರ ಮಾಡೋದು ಎಂದು ಹೇಳಿದರು.

ರಾಜಕೀಯವಾಗಿ ನಿಶ್ಯಕ್ತಿ ಅನ್ನೋ ಪದವೇ ನನ್ನಲ್ಲಿ ಇಲ್ಲ, ಯಾವಾಗಲೂ ಇಲ್ಲ, ಮುಂದೇನೂ ಇಲ್ಲ, ಈಗಲೂ ಇಲ್ಲ ಎಂದು ಸಿದ್ದರಾಮಯ್ಯ ಹೇಳಿದರು. ಈ ವೇಳೆ ಸಿಎಂ ಕಾಲೆಳೆದ ಯತ್ನಾಳ್, ನೀವೇ ಐದು ವರ್ಷ ಪೂರ್ತಿ ಮಾಡ್ತೀರೋ? ಅಥವಾ ಇವತ್ತೇ ಧನ್ಯವಾದ, ವಿದಾಯ ಹೇಳ್ತೀರೋ..? ಎಲ್ಲರಿಗೂ ಧನ್ಯವಾದ ಹೇಳ್ತೀರೋದು ನೋಡ್ತಿದ್ರೆ ನಮಗೆ ಸಂಶಯ ಬರುತ್ತಿದೆ ಎಂದರು.

ಯತ್ನಾಳ್‌ಗೆ ಏನೇನೋ ಸಂಶಯಗಳಿವೆ... ಅವರಿಗೆ ಅವರ ಪಕ್ಷದಿಂದ ಅದಕ್ಕೇ ತೆಗೆದುಹಾಕಿ ಬಿಟ್ಟರು ಎಂದು ಸಿಎಂ ಹೇಳಿದರು. ಅದಕ್ಕೆ ಯತ್ನಾಳ್ ನನಗೂ ಹೊರ ಹಾಕಿದ್ದಾರೆ, ನಿಮಗೂ ಹೊರ ಹಾಕಿದ್ದಾರೆ ಹೊರ ಹಾಕಿದವರಿಗೆ ಅನ್ಯಾಯ ಆಗಲ್ಲ, ನಿಮ್ಮನ್ನು ಕುತಂತ್ರದಿಂದ ಹೊರ ಹಾಕಿದರು, ಈಗ ಸಿಎಂ ಆಗಲಿಲ್ವಾ, ರಾಜಕೀಯದಲ್ಲಿ ಅದು ಸಾಮಾನ್ಯ ಎಂದರು.

ನಾನು ಅನ್ಯಾಯ ಆಯ್ತು ಎಂದು ಹೇಳಲ್ಲ, ಪಕ್ಷದಿಂದ ಹೊರ ಹಾಕಿದ್ದು ಸತ್ಯ ಅಲ್ಲ, ರಾಜಕೀಯದಲ್ಲಿ ಅವೆಲ್ಲಾ ಇರುತ್ತವೆ ಆದರೆ, ಸಂಶಯ ಇಟ್ಕೋಬೇಡಿ ಎಂದರು.

ನನ್ನ-ಸಿಎಂ ನಡುವೆ ಒಪ್ಪಂದವಾಗಿದೆ

ನನ್ನ ಮತ್ತು ಸಿದ್ದರಾಮಯ್ಯ ಅವರ ನಡುವೆ ಒಪ್ಪಂದವಾಗಿದೆ. ಹೈಕಮಾಂಡ್ ಒಂದು ಒಪ್ಪಂದಕ್ಕೆ ತಂದಿದೆ, ಆ ಪ್ರಕಾರ ನಾವಿಬ್ಬರೂ ನಡೆದುಕೊಂಡು ಹೋಗುತ್ತೇವೆಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಗೋಕರ್ಣದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಮಧ್ಯೆ ಎರಡೂವರೆ ವರ್ಷದ ಒಪ್ಪಂದ ಆಗಿಲ್ಲ ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ, ಅವರು ಐದು ವರ್ಷ ಮುಖ್ಯಮಂತ್ರಿಯಾಗಿ ಇರುವುದಿಲ್ಲ ಎಂದು ನಾನು ಯಾವತ್ತೂ ಹೇಳಿಲ್ಲ. ಹೈಕಮಾಂಡ್ ಅವರ ಪರ ಇಲ್ಲ ಎಂದು ಹೇಳಿಲ್ಲ. ಹೈಕಮಾಂಡ್ ಅವರ ಪರ ಇರುವುದಕ್ಕೆ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ ಎಂದರು.

ಮುಖ್ಯಮಂತ್ರಿ ಬದಲಾವಣೆ ಆಗುವುದಿಲ್ಲವೇ ಎಂಬ ಪ್ರಶ್ನೆಗೆ, ಮಾಧ್ಯಮದವರು ಆ ಬಗ್ಗೆ ಚರ್ಚೆ ಮಾಡುತ್ತಿದ್ದೀರಿ. ನಮ್ಮಲ್ಲಿ ಅದು ಇಲ್ಲ. ಪಕ್ಷ ಹೇಳಿದಂತೆ ನಾವು ಕೇಳುತ್ತೇವೆ ಎಂದರು.

ಚಳಿಗಾಲದ ಅಧಿವೇಶನಕ್ಕೆ ತೆರೆ

ಬೆಳಗಾವಿ ಸುವರ್ಣಸೌಧದಲ್ಲಿ ನಡೆದ ವಿಧಾನಮಂಡಲ ಚಳಿಗಾಲದ ಅಧಿವೇಶನಕ್ಕೆ ತೆರೆ ಬಿದ್ದಿದೆ. ಹತ್ತು ದಿನಗಳ ಕಾಲ ಉತ್ತರ ಕರ್ನಾಟಕದ ಚರ್ಚೆ, ಗದ್ದಲ, ಆರೋಪ ಪ್ರತ್ಯಾರೋಪ, ಕಾಲೆಳೆಯುವ ಪ್ರಸಂಗ, ನಾಯಕತ್ವ ಬದಲಾವಣೆ ಗೊಂದಲ ಸೇರಿ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆದಿದೆ. ಜೊತೆಗೆ ದ್ವೇಷ ಭಾಷಣ, ಸಾಮಾಜಿಕ ಬಹಿಷ್ಕಾರ ವಿರೋಧಿ ಮಸೂದೆಗಳು ಅಂಗೀಕಾರಗೊಂಡವು. ಅಧಿವೇಶನದಲ್ಲಿ ಒಟ್ಟು 22 ವಿಧೇಯಕ ಮಂಡನೆ ಮಾಡಿ ಅನುಮೋದನೆ ಪಡೆಯಲಾಯಿತು. ಪೂರಕ ಅಂದಾಜು ಕೂಡ ಮಂಡನೆ ಮಾಡಲಾಯಿತು. ಧನ ವಿನಿಯೋಗ ಸಂಪುಟ 1 ಮತ್ತು ಸಂಪುಟ 2 ಎರಡನ್ನೂ ಮಂಡಿಸಲಾಗಿದೆ. 134 ಲಿಖಿತ ಮೂಲಕ ಪ್ರಶ್ನೆಗೆ ಉತ್ತರ, 1750 ಗಮನ ಸೆಳೆಯುವ ಪ್ರಶ್ನೆಗೆ ಉತ್ತರ ನೀಡಲಾಗಿದೆ.

ಕಾಫಿ ಧಾರಣೆ ಕುಸಿತ: ಬೆಳೆಗಾರರಲ್ಲಿ ಕಳವಳ

• ಪ್ರಜೋದಯ ವರದಿ

ಹಾಸನ: ಏರು ಗತಿಯಲ್ಲಿ ಸಾಗುತ್ತಿದ್ದ ಕಾಫಿ ಧಾರಣೆ ಕಳೆದ ಮೂರ್ನಾಲ್ಕು ದಿನಗಳಿಂದ ದಿಢೀರ್ ಕುಸಿತ ಕಾಣುತ್ತಿರುವುದು ಬೆಳೆಗಾರರಲ್ಲಿ ಕಳವಳ ಸೃಷ್ಟಿಸಿದೆ.

ಕೆಲ ದಿನಗಳ ಹಿಂದೆಯಷ್ಟೇ ಅರೆಬಿಕಾ ಪಾರ್ಚ್‌ಮೆಂಟ್ ಒಂದು ಚೀಲ (50 ಕೆ.ಜಿ)ಕ್ಕೆ 28,500 ರೂ. ಇತ್ತು. ಶುಕ್ರವಾರ ಧಾರಣೆ ಅನ್ವಯ 26,600 ರೂ. ಗೆ ಕುಸಿತವಾಗಿದೆ. ಕೆಲವೇ ದಿನಗಳ ಅಂತರದಲ್ಲಿ ಚೀಲಕ್ಕೆ 2 ಸಾವಿರ ರೂ. ಕಡಿಮೆಯಾ ಗಿರುವುದು ಬೆಳೆಗಾರರಲ್ಲಿ ಆತಂಕ, ಗೊಂದಲವನ್ನು ಸೃಷ್ಟಿ ಮಾಡಿದೆ. ಅರೆಬಿಕಾ ಚೆರಿ 15,250ರೂ. ಇತ್ತು.ಪ್ರಸ್ತುತ 14,000 ರೂ. ಗೆ ಇಳಿಕೆಯಾಗಿದೆ. ಅದೇ ರೀತಿ ರೋಬಸ್ಟಾ ಪಾರ್ಚ್ ಮೆಂಟ್ ಈ ಹಿಂದೆ 18,000ರೂ. ಇತ್ತು. ಈಗ 16,500 ರೂ. ಗೆ ಕುಸಿತ ಕಂಡಿದೆ. ರೋಬಸ್ಟಾ ಚೆರಿ 10,250 ರೂ. ನಿಂದ 8,800ಕ್ಕೆ ಇಳಿಕೆ ಯಾಗಿದೆ. ಸದ್ಯ ಕಾಫಿ ಧಾರಣೆ ಹಾವು-ಏಣಿ ಆಟವಾಡುತ್ತಿರುವುದರಿಂದ ಕಾಫಿಯನ್ನು ಸಂಗ್ರಹಿಸಿಟ್ಟುಕೊಂಡು ಉತ್ತಮ ಬೆಲೆ ಬರುವವರೆಗೂ ಕಾಯಬೇಕೋ ಅಥವಾ ಸಿಕ್ಕ ಬೆಲೆಗೆ ಮಾರಾಟ ಮಾಡಬೇಕೋ ಎಂಬ ಗೊಂದಲದಲ್ಲಿ ಬೆಳೆಗಾರಿದ್ದಾರೆ.

(ಶುಕ್ರವಾರದ ಕಾಫಿ ಧಾರಣೆ)

- ಅರೆಬಿಕಾ ಪಾರ್ಚ್‌ಮೆಂಟ್-26,600
- ಅರೆಬಿಕಾ ಚೆರಿ-14,000
- ರೊಬಸ್ಟಾ ಪಾರ್ಚ್‌ಮೆಂಟ್-16,500
- ರೊಬಸ್ಟಾ ಚೆರಿ - 8800
- (ಆರ್‌ಸಿ ಒಟಿ: 335, ಎಸಿ ಒಟಿ 530)

ಹೆಚ್ ಕೆ.ಮಂಜುಳಾ ನಿಧನ

• ಪ್ರಜೋದಯ ವರದಿ

ಹಾಸನ: ನಗರದ ಅನ್ನಪೂರ್ಣೇಶ್ವರಿ ಕಲ್ಯಾಣ ಮಂಟಪದ ಮಾಲೀಕರಾದ ದಿ॥ಹೆಚ್.ವಿ.ಕೃಷ್ಣ ಅವರ ಪತ್ನಿ ಹೆಚ್.ಕೆ.ಮಂಜುಳಾ ಅವರು ಶುಕ್ರವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಶನಿವಾರ ಹೊಳೆನರಸೀಪುರದಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಗೋ ಮಾಂಸ ಸಾಗಾಟ ಮಾಡಿದವನ ಬಿಡುಗಡೆ ಖಂಡಿಸಿ ಪ್ರತಿಭಟನೆ

• ಪ್ರಜೋದಯ ವರದಿ

ಹಾಸನ: ಅಕ್ರಮ ಗೋ ಮಾಂಸ ಸಾಗಾಟ ಮಾಡಿದವನನ್ನು ಸಾಕ್ಷಿ ಸಮೇತ ಹಿಡಿದರೂ ಶಿಕ್ಷೆಗೆ ಗುರಿಪಡಿಸುವ ಬದಲು ಪೊಲೀಸರು ಜಾಮೀನು ಮಂಜೂರು ಮಾಡಿದ್ದಾರೆಂದು ಆರೋಪಿಸಿ ಹಿಂದೂಪರ ಸಂಘಟನೆ ಕಾರ್ಯಕರ್ತರು ಶುಕ್ರವಾರ ರಾತ್ರಿ ನಗರ ಠಾಣೆ ಎದುರು ಪ್ರತಿಭಟನೆ ನಡೆಸಿದರು.

ನಗರದ ಸಂತೆಪೇಟೆಯಲ್ಲಿ ಗುರುವಾರ ಮಧ್ಯಾಹ್ನ ಹೊಳೆನರಸೀಪುರದಿಂದ ಬುಲೆರೋ ಪಿಕ್‌ಅಪ್ ವಾಹನದಲ್ಲಿ ತರುತ್ತಿದ್ದ ಅಕ್ರಮ ಗೋ ಮಾಂಸವನ್ನು ಹಿಂದೂಪರ ಕಾರ್ಯಕರ್ತರು ವಶಕ್ಕೆ ಪಡೆದಿದ್ದರು. ಈ ಸಂಬಂಧ ವಾಹನವನ್ನು ವಶಕ್ಕೆ ಪಡೆದಿದ್ದ ನಗರ ಠಾಣೆ ಪೊಲೀಸರು ಚಾಲಕನನ್ನು ಬಂಧಿಸಿದ್ದರು. ಆದರೆ ಮಾರನೇ ದಿನವೇ ಜಾಮೀನು ನೀಡಿ ಬಿಡುಗಡೆ ಮಾಡಿ ದ್ದಾರೆ. 2021ರ ಜಾನುವಾರು ಹತ್ಯೆ ನಿಷೇಧ ಕಾಯ್ದೆ ಪ್ರಕಾರ ಆರೋಪಿತರಿಗೆ ಕಠಿಣ ಶಿಕ್ಷೆ ವಿಧಿಸಬಹುದು. ಜನಪ್ರತಿನಿಧಿಯೊಬ್ಬರ ಸೂಚನೆ ಮೇರೆಗೆ ಜಾಮೀನು ಮಂಜೂರು ಮಾಡಿದ್ದಾರೆಂದು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪೊಲೀಸರೊಂದಿಗೆ ಮಾತಿನ ಚಕಮಕಿ

ಹಿಂದೂಪರ ಸಂಘಟನೆ ಕಾರ್ಯಕರ್ತರಾದ ಲೋಕೇಶ್, ಅಭಿ, ಧರ್ಮನಾಯ್ಕ ಹಾಗು ಇತರರು ವೃತ್ತ ನಿರೀಕ್ಷಕ ಗಂಗಾಧರಪ್ಪ ಅವರೊಂದಿಗೆ ಕೆಲಹೊತ್ತು ವಾಗ್ವಾದ ನಡೆಯಿತು. ಹಿಂದೂಗಳು ಪೂಜಿಸುವ ಗೋಮಾತೆಯನ್ನು ವಧೆ ಮಾಡುವ ಕೆಲಸ ಹಾಸನದಲ್ಲಿ ಅವ್ಯಾಹತ ವಾಗಿ ನಡೆಯುತ್ತಿದೆ. ಆದರೂ ಪೊಲೀಸರು ಕಣ್ಮುಚ್ಚಿ ಕುಳಿತಿದ್ದಾರೆ. ನಾವೇ ಖುದ್ದಾಗಿ ವಾಹನ ವಶಕ್ಕೆ ಪಡೆದರೂ ಒಂದು ಗಂಟೆ ತಡವಾಗಿ ಸ್ಥಳಕ್ಕೆ ಬಂದರು. ಸುಮೊಟೊ ಪ್ರಕರಣ ದಾಖಲಿಸಿ ಕೊಂಡು ಆರೋಪಿಯನ್ನು ಬಿಟ್ಟು ಕಳುಹಿಸಿದ್ದಾರೆ. ಪೊಲೀಸರ ನಿರ್ಲಕ್ಷ್ಯದಿಂದ ಲಕ್ಷಾಂತರ ಹಿಂದೂಗಳ ಭಾವನೆಗೆ ಧಕ್ಕೆಯುಂಟಾಗಿದೆಯೆಂದು ಆಕ್ರೋಶ ವ್ಯಕ್ತಪಡಿಸಿದರು.

» ನಾಲ್ಕನೇ ಪುಟದಲ್ಲಿ

ಹಣ್ಣಿನ ಬೆಳೆಗಾಗಿ ಪ್ರತ್ಯೇಕ ರಾಷ್ಟ್ರೀಯ ಮಂಡಳಿ ಸ್ಥಾಪಿಸಿ

ದೇವೇಗೌಡರಿಂದ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್‌ಗೆ ಮನವಿ

• ಪ್ರಜೋದಯ ವರದಿ

ನವದೆಹಲಿ: ಹಲಸು, ಹುಣಸೆ ಮತ್ತು ನೇರಳೆ ಮುಂತಾದ ಪೌಷ್ಟಿಕಾಂಶಯುಕ್ತ ಹಣ್ಣಿನ ಬೆಳೆಗಳಿಗಾಗಿ ಪ್ರತ್ಯೇಕವಾದ ರಾಷ್ಟ್ರೀಯ ಮಂಡಳಿ ಸ್ಥಾಪಿಸುವಂತೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಶುಕ್ರವಾರ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಸಂಸತ್ ಭವನದಲ್ಲಿ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಕೃಷಿ ಸಚಿವರನ್ನು ಭೇಟಿಯಾಗಿ, ತಮ್ಮ ಪ್ರಸ್ತಾವನೆ ಕುರಿತ ಪತ್ರವನ್ನು ನೀಡಿದರು.

ಈ ವೇಳೆ ಮಾತನಾಡಿದ ಅವರು, ಹುಣಸೆ, ಹಲಸು ಮತ್ತು ನೇರಳೆ ಔಷಧ ಗುಣಗಳುಳ್ಳ ಪೌಷ್ಟಿಕಾಂಶಯುಕ್ತ ಹಣ್ಣಿನ ಬೆಳೆಗಳಾಗಿವೆ. ಅವುಗಳನ್ನು ಶತಮಾನಗಳಿಂದ ಭಾರತದಲ್ಲಿ ಬೆಳೆಯ ಲಾಗುತ್ತಿದೆ. ಈ ಬೆಳೆಗಳು ಸಾವಯವವಾಗಿ ಬೆಳೆಯುತ್ತವೆ. ಪ್ರಕೃತಿಯಲ್ಲಿ ಇವು ಸಶಕ್ತವಾಗಿ ಬೆಳೆಯುತ್ತವೆ. ಕಡಿಮೆ ಮಳೆಯ ಅಗತ್ಯವಿರುತ್ತದೆ. ಕಡಿಮೆ ವೆಚ್ಚದಲ್ಲಿ ಬೆಳೆಸಲಾಗುತ್ತದೆಂದು ಕೃಷಿ ಸಚಿವರ ಗಮನ ಸೆಳೆದರು.

ಹುಣಸೆ ಹಣ್ಣನ್ನು ದೇಶಾದ್ಯಂತ ವ್ಯಾಪಕವಾಗಿ ಬೆಳೆಯಲಾಗುತ್ತದೆ. ಮಧ್ಯ ಪೂರ್ವ ಮತ್ತು ದಕ್ಷಿಣ ಭಾರತದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಹಲಸು ಮತ್ತು ನೇರಳೆಗಳನ್ನು ಪ್ರಧಾನವಾಗಿ ಭಾರತದ ದಕ್ಷಿಣ, ಮಧ್ಯ, ಪೂರ್ವ ಮತ್ತು ಪೂರ್ವ ರಾಜ್ಯಗಳಲ್ಲಿ ಬೆಳೆಯಲಾ ಗುತ್ತದೆ. ಭಾರತವು ಈ ಹಣ್ಣುಗಳ ಅತಿದೊಡ್ಡ ಉತ್ಪಾದಕ ರಾಷ್ಟ್ರವಾಗಿದೆ. ಏಷ್ಯಾದ ಕೆಲ ದೇಶಗಳು ಮತ್ತು ಆಫ್ರಿಕನ್ ದೇಶಗಳಲ್ಲಿ ಸಣ್ಣ ಪ್ರಮಾಣದಲ್ಲಿ ಈ ಕೃಷಿ ಕಂಡುಬರುತ್ತದೆಂಬ ಅಂಶವನ್ನು ಮಾಜಿ ಪ್ರಧಾನಿಗಳು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಭಾರತದಲ್ಲಿರುವ ಕೃಷಿ ಪದ್ಧತಿಗಳನ್ನು ಉಲ್ಲೇಖಿಸುತ್ತಾ ವಿವರ ನೀಡಿರುವ ದೇವೇಗೌಡರು, ಸಾಂಪ್ರದಾಯಿಕವಾಗಿ ಈ ಬೆಳೆಗಳನ್ನು ಬೀಜಗಳನ್ನು ನೆಟ್ಟು ಬೆಳೆಯಲಾಗುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಕಸಿ ಮಾಡಿದ ಸಸಿಗಳು ಸಾಮಾನ್ಯವಾಗಿದ್ದು, ಇಳುವರಿ ಮತ್ತು ಗುಣ ಮಟ್ಟದಲ್ಲಿ ಸುಧಾರಣೆ ಕಂಡುಬಂದಿದೆ. ಪ್ರತಿ ವರ್ಷ ದೊಡ್ಡ ಪ್ರಮಾಣದ ಉತ್ಪಾದನೆ ಮತ್ತು ಕೊಯ್ಲು ಮಾಡುತ್ತಿದ್ದರೂ ಹಣ್ಣುಗಳ

» ನಾಲ್ಕನೇ ಪುಟದಲ್ಲಿ

ಬೇಲೂರು ಪಟ್ಟಣ ಪ್ರಗತಿಗೆ ಸಚಿವರೊಂದಿಗೆ ಸಭೆ

• ಪ್ರಜೋದಯ ವರದಿ

ಹಾಸನ: ವಿಶ್ವಪಾರಂಪರಿಕ ಪಟ್ಟಿಗೆ ಸೇರಿದ ಬೇಲೂರು ಪಟ್ಟಣದ ಸ್ವಚ್ಛತೆ, ಎಸ್.ಎಫ್.ಸಿ . ನಗರೋತ್ಥಾನ ಹಾಗು ಆಶ್ರಯ ಯೋಜನೆಗಳ ಪ್ರಗತಿಯಲ್ಲಿ ಕುಂಠಿತ ಗೊಂಡಿರುವ ಬಗ್ಗೆ ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಸಮರ್ಪಕ ಉತ್ತರ ಸಿಗದ ಹಿನ್ನಲೆ ಪೌರಾಡಳಿತ ಸಚಿವ ರಹೀಂ ಖಾನ್ ಅವ ರೊಂದಿಗೆ ಶಾಸಕ ಹೆಚ್.ಕೆ.ಸುರೇಶ್ ಅವರು ಶುಕ್ರವಾರ ಬೆಳಗಾವಿಯ ಸುವರ್ಣಭವನದಲ್ಲಿ ಸಭೆ ನಡೆಸಿದರು.

ಸಭೆಯಲ್ಲಿ ಬೇಲೂರು ಪುರಸಭೆಯ ಅಧಿಕಾರಿಗಳನ್ನು ಬೇರೆಡೆ ತುರ್ತಾಗಿ ನಿಯೋಜನೆಗೊಳಿಸುವುದನ್ನು ರದ್ದು ಪಡಿಸಬೇಕು. ಪುರಸಭೆ ಅಧಿಕಾರಿಗಳು ಖಾತೆ ಬದಲಾವಣೆ ಮತ್ತು ಇ-ಸ್ವತ್ತು ನೀಡಲು ಲಂಚ ಕೇಳುತ್ತಿರುವ ಕುರಿತು ಹಾಗು ಬೇಲೂರಿನ ಪ್ರಗತಿಯ ಬಗ್ಗೆ ಸಭೆಯಲ್ಲಿ ಸಚಿವರ ಗಮನಕ್ಕೆ ತರಲಾಯಿತು.

ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಸಚಿವರು, ಬೇಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಅಮಾನತ್ತು ಗೊಳಿಸುವುದಾಗಿ ತಿಳಿಸಿದರು. ಹಾಗೆಯೇ, ದೇವಸ್ಥಾನ ಆವರಣದಲ್ಲಿ ಸ್ವಚ್ಛತೆ ಕಾಪಾಡುವ ಕುರಿತು ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಾಗಿ ತಿಳಿಸಿದರು.

ಹೋರಾಟಗಾರರ ಮೇಲೆ ದ್ವೇಷಪೂರಿತ ಪ್ರಕರಣ

ಸರ್ಕಾರ ಸಂಪುಟದಲ್ಲಿಟ್ಟು ವಾಪಾಸ್ ಪಡೆಯುವಂತೆ ಹೆಚ್.ಕೆ.ಕುಮಾರಸ್ವಾಮಿ ಆಗ್ರಹ

• ಪ್ರಜೋದಯ ವರದಿ

ಸಕಲೇಶಪುರ: ದಸರಾ ಆನೆ ಅರ್ಜುನ ಸಾವಿನ ಕುರಿತು ಸಮಗ್ರ ತನಿಖೆ ನಡೆಸುವ ಜೊತೆಗೆ ಹೋರಾಟಗಾರರ ಮೇಲೆ ದಾಖಲಿಸಿರುವ ಪ್ರಕರಣವನ್ನು ಸರ್ಕಾರ ಸಚಿವ ಸಂಪುಟದಲ್ಲಿಟ್ಟು ವಾಪಾಸ್ ಪಡೆಯದಿದ್ದರೆ ಹೋರಾಟ ನಡೆಸುವುದು ಅನಿವಾರ್ಯವಾಗಲಿದೆಂದು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಎಚ್ಚರಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೋರಾಟಗಾರರ ಮೇಲೆ ಪ್ರಕರಣ ದಾಖಲಿಸಿರುವುದು ಪೂರ್ವನಿಯೋಜಿತ ಹಾಗು ದ್ವೇಷಪೂರಿತ ಕ್ರಮವಾಗಿದೆ. 2023 ಡಿ.5 ರಂದು ಅರ್ಜುನ ಆನೆಯ ಸಾವು ಸಂಭವಿಸಿತ್ತು. ಎರಡು ವರ್ಷಗಳ ಬಳಿಕ 19 ಮಂದಿ ರೈತರನ್ನು ಆರೋಪಿಗಳೆಂದು ಹೆಸರಿಸಿ ನ್ಯಾಯಾಲಯಕ್ಕೆ ಹಾಜರಾಗುವಂತೆ ನೋಟೀಸ್ ನೀಡಲಾಗಿದೆ. ಆದರೆ, ಘಟನೆ ನಡೆದ ಸಮಯದಲ್ಲಿ ಆರೋಪಿಗಳಿಗೆ ಯಾವುದೇ ನೋಟೀಸ್ ಅಥವಾ ಮಾಹಿತಿ ನೀಡಲಾಗಿರಲಿಲ್ಲ. ಅಪರಾಧ ನಡೆದಿದ್ದರೆ ತಕ್ಷಣವೇ ಕ್ರಮ ಕೈಗೊಳ್ಳಬೇಕಿತ್ತು. 2 ವರ್ಷ ಮೌನ ವಹಿಸಿ ಇದೀಗ ಏಕಾಏಕಿ ಪ್ರಕರಣ ದಾಖಲಿಸಿರುವುದು ಸರ್ಕಾರದ ಉದ್ದೇಶವೇನು ಎಂದು ಪ್ರಶ್ನೆ ಮಾಡಿದರು. ಅರ್ಜುನ

ವಾಂಟರ್ಕ ಎಂಬ ಜೀವಿ ಗೊತ್ತೇ ನಿಮಗೆ!

ಇದೊಂದು ಜೀವಿಯ ಹೆಸರನ್ನು ಕೇಳಿದ ನಿಮಗೆ ಅಚ್ಚರಿ ಎನಿಸಬಹುದು. ಇಂಥ ಹೆಸರಿನ ಮೂಲವೇನು, ಇದರ ಪದನಿಷ್ಪತ್ತಿ ಹೇಗೆ ಎಂಬ ಕುತೂಹಲವೂ ಮೂಡಬಹುದು. ವಾಂಟರ್ಕ ಎಂಬ ಹೆಸರು ಬಹುಶಃ, ನಮ್ಮ ಹಳ್ಳಿಯ ಸುತ್ತಮುತ್ತಲಿನ ಸುಮಾರು 30 ಚದರ ಕಿ.ಮೀ. ವ್ಯಾಪ್ತಿಯ ಪ್ರದೇಶದಲ್ಲಿ ಮಾತ್ರ ಬಳಕೆಯಲ್ಲಿದೆ ಎನಿಸುತ್ತದೆ.

ಇದರ ಹೆಸರಿನ ಮೂಲ ಹುಡುಕುವುದಕ್ಕಿಂತ, ಇಂಥದೊಂದು ಪುಟಾಣಿ ಜೀವಿಯ ದಿನಚರಿಯನ್ನು, ಅದರ ಬದುಕನ್ನು ಗಮನಿಸುವುದೇ ಒಂದು ಕೌತುಕ. ಪೇಟೆಯಿಂದ ಮೂರು ಕಿ.ಮೀ. ದೂರದಲ್ಲಿ, ಅಷ್ಟೇನೂ ದಟ್ಟವಲ್ಲದ ಕಾಡಿನ ನಡುವೆ, ಗದ್ದೆ ಬಯಲಿನ ತುದಿಯಲ್ಲಿರುವ ನಮ್ಮ ಹಳ್ಳಿಮನೆಯ ಸುತ್ತ ಹಲವು ಪ್ರಾಕೃತಿಕ ವ್ಯಾಪಾರಗಳು ನಡೆಯುತ್ತಲೇ ಇರುತ್ತವೆ.

ಅದೆಷ್ಟೋ ಇಂಥ ವಿಸ್ಮಯಗಳು ನಮ್ಮ ಅರಿವಿಗೆ ಬಾರದೇ ಇರುವುದೂ ಉಂಟು. ನಮ್ಮ ಪಾಡಿಗೆ ನಾವು ಮಕ್ಕಳು ಶಾಲೆಗೆ ಹೋಗುತ್ತಿದ್ದರೆ, ದೊಡ್ಡವರು ಗದ್ದೆಯಲ್ಲಿ ಉಳುಮೆ ಮಾಡುತ್ತಾ, ನಾಟಿ ಮಾಡುತ್ತಾ, ಹಾಡಿಯಿಂದ ದರಲೆ ತರುತ್ತಾ, ಹಕ್ಕಲಿನಿಂದ ಸೌದೆ ತರುತ್ತಾ ತಮ್ಮ ದಿನಚರಿಯನ್ನು ದೂಡುತ್ತಿದ್ದರು.

ಕಾಡು, ಹಾಡಿ, ಹಕ್ಕಲು, ಬ್ಯಾಣಗಳೊಂದಿಗೆ ದಟ್ಟ ಸಂಬಂಧ ಹೊಂದಿದ್ದ ನಮ್ಮೂರಿನ ಗದ್ದೆಗಳು ಅವೆಷ್ಟೋ ಅಚ್ಚರಿಗಳ ತವರು. ಇಂಥ ಅಚ್ಚರಿಗಳಲ್ಲಿ ಒಂದು ಎಂದರೆ ವಾಂಟರ್ಕ ನಡೆಸುವ ಉಳುಮೆ!

ಜೂನ್ ಮೊದಲವಾರ ತಪ್ಪದೇ ಮಳೆಯಾಗುವ ಹಳ್ಳಿ ನಮ್ಮದು. ಈ ರೀತಿ ಸಮಯಕ್ಕೆ ಸರಿಯಾಗಿ ಮಳೆ ಬಿದ್ದರೆ ಕೃಷಿಕರಿಗೆ ನಿಜಕ್ಕೂ ಸಂತಸ. ಗದ್ದೆ, ಅಗೇಡಿಗಳನ್ನು ಹದಗೊಳಿಸಿ, ಭತ್ತದ ನಾಟಿಗೆ ತಯಾರು ಮಾಡತೊಡಗುತ್ತಾರೆ.

ಒಮ್ಮೆ ಮಳೆ ಬಂತೆಂದರೆ ಸಕಲೆಂಟು ಜೀವಿಗಳಿಗೂ ಎಲ್ಲಿಲ್ಲದ ಉತ್ಸಾಹ, ಸ್ಫೂರ್ತಿ, ಜೀವನಾಸಕ್ತಿ. ರಾತ್ರಿಯಿಡೀ ವಟಗುಟ್ಟುವ ಕಪ್ಪೆಗಳು ತಮ್ಮ ಉತ್ಸಾಹವನ್ನು ಶಬ್ದಮಾಡಿ ತೋರಿಸಿದರೆ, ಮರವೊಂದರ ಮೇಲೆ ಮುತ್ತಿ ಕುಳಿತು, ಸೀರಿಯಲ್ ಸೆಟ್‌ನಂತೆ ಬೆಳಕು ಬೀರುವ ಮೂಲಕ ಮರವನ್ನೇ ಬೆಳಗುವ ಮಿಣುಕು ಹುಳಗಳ ಝಗಮಗ ಬೆಳಕಿನಾಟ ಇನ್ನೊಂದೆಡೆ.

ವಿದ್ಯುತ್ ಸಂಪರ್ಕವೇ ಇಲ್ಲದ ಅಂದಿನ ದಿನಗಳಲ್ಲಿ, ಕಗ್ಗತ್ತಲ ರಾತ್ರಿ, ಮನೆಯಿಂದ ಸ್ವಲ್ಪ ದೂರದಲ್ಲಿನ ಮರವೊಂದರಲ್ಲಿ ಕುಳಿತು ಒಮ್ಮೆಗೇ ಬೆಳಕು ಬೀರುವ ಸಾವಿರಾರು ಮಿಣುಕು ಹುಳುಗಳ ಇಂಥ ಸಾಮೂಹಿಕ ಬೆಳಕಿನ ಹಬ್ಬವು ನಮ್ಮಲ್ಲಿ ಉದಿಸುತ್ತಿದ್ದ ಬೆರಗನ್ನು ವರ್ಣಿಸಲು ಪದಗಳಿಲ್ಲ. ಮಳೆ ಬಂದು, ಎಲ್ಲೆಡೆ ನೀರು ಹರಿಯತೊಡಗಿದಾಗ ಒಳ್ಳೆ ಹಾವುಗಳಿಗಂತೂ ಎಲ್ಲಿಲ್ಲದ ಉಮೇದು. ಗದ್ದೆ, ತೋಟ, ಬಾವಿ, ತೋಡು, ಗದ್ದೆಯಂಚಿನ ನಮ್ಮ ದಾರಿ, ಬೇಲಿ ಎಂದು ಓಡಾಡುತ್ತಿರುತ್ತವೆ!

ಹತ್ತಾರು ದಿನ ಚೆನ್ನಾಗಿ ಮಳೆ ಬಿದ್ದು, ಗದ್ದೆಯಲ್ಲಿ ನೀರು ನಿಂತು, ಗದ್ದೆ ಬಯಲಿನ ಉದ್ದಕ್ಕೂ ಒಂದು ಭಾಗದಲ್ಲಿ ಹರಿಯುವ ತೋಡಿನಲ್ಲಿ ಉಜರು (ಝರಿ) ನೀರು ಹರಿಯ ತೊಡಗಿದ ತಕ್ಷಣ ನಮ್ಮೂರಲ್ಲಿ ಹಾವುಗಳ ಮೆರವಣಿಗೆ! ಗದ್ದೆಯಿಂದ ಬಾವಿಗೆ, ಬಾವಿಯಿಂದ ಅಂಗಳಕ್ಕೆ, ಅಂಗಳದಿಂದ ತೋಟಕ್ಕೆ ಓಡಾಡುತ್ತಿರುತ್ತವೆ!

ಹೆಚ್ಚಿನವು ಒಳ್ಳೆ ಹಾವು! ಅವು ಒಳ್ಳೆಯವೂ ಹೌದು, ಅವುಗಳ ಹೆಸರು ಸಹ ಒಳ್ಳೆ! ದುರ್ಗ ಸಿಂಹನ ಪಂಚತಂತ್ರದಲ್ಲಿ, ಪಂಪನ ಕಾವ್ಯದಲ್ಲೂ ಇಂಥ ಹಾವುಗಳನ್ನು ಒಳ್ಳೆ ಎಂದೇ ಕರೆದಿದ್ದಾರೆ. ಹತ್ತಾರು ದಿನ ಮಳೆ ಬಂದು, ಗದ್ದೆ ತುಂಬಾ ನೀರು ತುಂಬಿದಾಗ, ಅಲ್ಲಿ ಓಡಾಡುವ ಮನುಷ್ಯರ ಕಾಲಿಗೂ ಒಳ್ಳೆ ಹಾವು ತಾಗುವುದುಂಟು!

"ಮಳೆ ಕಡಿಮೆಯಾದರೂ ಹರಿಯುತ್ತಲೇ ಇರುವ ಈ ನೀರು ಸ್ಫಟಿಕ ಶುದ್ಧ. ಕ್ರಮೇಣ ಮಳೆ ಕಡಿಮೆಯಾಗುತ್ತದೆ; ಎರಡನೆಯ ಬೆಳೆಗಾಗಿ ಗದ್ದೆಗಳನ್ನು ಹಸನು ಮಾಡುವ ಸಮಯ. ಚಳಿಗಾಲದ ಆರಂಭದಲ್ಲಿ ಹೀಗೆ ಗದ್ದೆಯನ್ನು ಉಳುಮೆ ಮಾಡಿ, ಬೀಜ ಬಿತ್ತಿದಾಗ, ಅದೆಲ್ಲಿಂದಲೋ ಬರುವ ವಾಂಟರ್ಕಗಳು ಗದ್ದೆ ಮತ್ತು ಅಗೇಡಿಯನ್ನು ಉಳುಮೆ ಮಾಡುವುದುಂಟು!"

ಅದು ಕಚ್ಚಿದರೂ ಏನೂ ತೊಂದರೆ ಇಲ್ಲ ಎಂಬ ಮಾಹಿತಿ ಇರುವ ನಮ್ಮ ಹಳ್ಳಿಯ ಜನರು, ಅವುಗಳನ್ನು ನಿರ್ಲಕ್ಷಿಸಿ, ತಮ್ಮ ಪಾಡಿಗೆ ಒಳ್ಳೆ ಹಾವುಗಳಿದ್ದ ಗದ್ದೆಗಳಲ್ಲೇ ನಾಟಿಮಾಡುವುದೂ ಉಂಟು! ಚೆನ್ನಾಗಿ ಮಳೆ ಹುಯ್ದ ನಂತರ, ಕಾಡು ಗುಡ್ಡಗಿಂದ, ಮರಗಳ ಬೇರಿನ ಸಂದಿಯಿಂದ ಸೃಜಿಸಿ ಕೆಳಗೆ ಹರಿಯುವ ಉಜರು ನೀರು, ನಾಲ್ಕೆಂಟು ವಾರಗಳ ತನಕ ತೋಡುಗಳಲ್ಲಿ ಹರಿಯುತ್ತಲೇ ಇರುತ್ತದೆ.

ಮಳೆ ಕಡಿಮೆಯಾದರೂ ಹರಿಯುತ್ತಲೇ ಇರುವ ಈ ನೀರು ಸ್ಫಟಿಕ ಶುದ್ಧ. ಕ್ರಮೇಣ ಮಳೆ ಕಡಿಮೆಯಾಗುತ್ತದೆ; ಎರಡನೆಯ ಬೆಳೆಗಾಗಿ ಗದ್ದೆಗಳನ್ನು ಹಸನುಮಾಡುವ ಸಮಯ. ಚಳಿಗಾಲದ ಆರಂಭದಲ್ಲಿ ಹೀಗೆ ಗದ್ದೆಯನ್ನು ಉಳುಮೆ ಮಾಡಿ, ಬೀಜ ಬಿತ್ತಿದಾಗ, ಅದೆಲ್ಲಿಂದಲೋ ಬರುವ ವಾಂಟರ್ಕಗಳು ಗದ್ದೆ ಮತ್ತು ಅಗೇಡಿಯನ್ನು ಉಳುಮೆ ಮಾಡುವುದುಂಟು!

ಹೊಳವಾದ ದಿನ ಮುಂಜಾನೆ ಎದ್ದು, ಮನೆ ಮುಂದಿನ ಅಗೇಡಿಯನ್ನು ಕಂಡರೆ, ಅಲ್ಲಿ ಬೆಳೆದಿದ್ದ ಬತ್ತದ ಸಸಿಯ ನಡುವೆ, ಸುಮಾರು ಒಂದಡಿ ಅಗಲದ ದಾರಿ ಕಾಣಿಸುತ್ತದೆ. ಅದಕ್ಕೂ ಒಂದು ವಾರ ಮುಂಚೆ ಮನುಷ್ಯರು ಉಳುಮೆ ಮಾಡಿ, ಕೆಸರು ಗದ್ದೆಯಲ್ಲಿ ಭತ್ತ ಬಿತ್ತಿ, ಸಸಿಯಾಗಿ ನಾಲ್ಕಾರು ದಿನಗಳ ನಂತರ, ಈ ರೀತಿ ರಾತ್ರಿಯ ಹೊತ್ತಿನಲ್ಲಿ ಆ ಭತ್ತದ ಸಸಿಗಳ ನಡುವೆ ಚಲಿಸಿ, ಉಳುಮೆಯಂಥ ಕೆಲಸವನ್ನು ಮಾಡಿ, ಅಲ್ಲಿನ ಭತ್ತದ ಸಸಿಗಳನ್ನು ಮಡಿಸಿ ದಾರಿ ಮಾಡಿದಂತೆ ಮಾಡಿದ ಭೂಪನಾದರೂ ಯಾರು? ಅದಾ. ಅದು ವಾಂಟರ್ಕನ ಕೆಲಸ. ಅಗೇಡಿಯ ಮಧ್ಯ ಹೂಟೆ ಮಾಡಿದಂತಿದೆ ಎನ್ನುತ್ತಿದ್ದರು ನಮ್ಮೂರಿನ ರೈತರು.

ನಮ್ಮ ಹಾಲಾಡಿ ಸುತ್ತಲಿನ ಕನ್ನಡದಲ್ಲಿ ವಾಂಟರ್ಕ ಎಂದರೆ ಪುಟ್ಟ ಆಮೆ! (ತೇಜಸ್ವಿಯವರು ಮೂಡಿಗೆರೆ ಸನಿಹ ಕಂಡ ಇಂಥ ಆಮೆಯನ್ನು ವಾಟರ್ಕ ಎಂದು, ತಮ್ಮ ಒಂದು ಲೇಖನದಲ್ಲಿ ಕರೆದಿದ್ದಾರೆ). ಸಿಹಿನೀರಿನಲ್ಲಿ ವಾಸಿಸುವ ಈ ಆಮೆಗಳು, ರಾತ್ರಿ ಹೊತ್ತಿನಲ್ಲಿ ಅಗೇಡಿಯಲ್ಲಿ ಅತ್ತಿಂದಿತ್ತ ಓಡಾಡಿ ಮಾಡಿದ ಆ ದಾರಿಯನ್ನು ಬೆಳಗಿನ ಹೊತ್ತಿನಲ್ಲಿ ನೋಡುವ ಅನುಭವ ವಿಶಿಷ್ಟ.

ಭತ್ತದ ಸಸಿ ತುಂಬಿರುವ ಅಗೇಡಿಯ ಹಸಿರು ಕ್ಯಾನ್‌ವಾಸಿನ ಮೇಲೆ ಅದಾರೋ ಪ್ರಕೃತಿ ಪ್ರೇಮಿ, ನೀರವ ರಾತ್ರಿಯಲ್ಲಿ ಸಂಚರಿಸುತ್ತಾ, ವಿಶಿಷ್ಟ ಅರ್ಥ ನೀಡುವ ಒಂದು ರೇಖಾಚಿತ್ರ ಬರೆದಂತಿರುತ್ತದೆ. ಈ ವಾಂಟರ್ಕ ಎಂಬ ಆಮೆಗಳು ಸಾಮಾನ್ಯವಾಗಿ ನಿಶಾಚರಿಗಳು. ಅರ್ಧ ಅಡಿಯಿಂದ ಒಂದಡಿ ಉದ್ದದ, ಹಸಿರು ದೇಹದ ಆ ಆಮೆಗಳು, ತಮ್ಮ ಚಿಪ್ಪಿನಿಂದ ತಲೆಯನ್ನು ಹೊರಗೆ ಹಾಕಿ ನೋಡುವ ರೀತಿಯೇ ವಿಭಿನ್ನ, ಕಾವ್ಯಾತ್ಮಕ. ನಮ್ಮೂರಿನ ಕೆಲವು ರೈತರು ಅವುಗಳನ್ನು ಆಗಾಗ ಹಿಡಿಯುವುದುಂಟು, ಪದಾರ್ಥ ಮಾಡಲು!

ಈ ಪುಟ್ಟ ಆಮೆಗಳು ನಿಶಾಚರಿಗಳು ಎಂದೆನಲ್ಲ, ಅದಕ್ಕೆ ನಮಗೆ ಒಮ್ಮೊಮ್ಮೆ ಪುರಾವೆ ದೊರೆಯುತ್ತಿತ್ತು! ಅದು ವಿದ್ಯುತ್ ಇಲ್ಲದ ಕಾಲ. ಅಂಥ ರಾತ್ರಿಯಲ್ಲಿ, ಅವು ಕಣ್ಣಿಗೆ ಕಾಣದೇ ಇದ್ದರೂ, ವಾಂಟರ್ಕಗಳ ಓಡಾಟ ನಮಗೆ ಸಶಬ್ದವಾಗಿ ಕೇಳುವುದುಂಟು! ಅದು ಹೇಗೆಂದರೆ- ನಮ್ಮ ಹಳ್ಳಿ ಮನೆಯ ಮುಂದೆ ಇರುವ ಅಂಗಳದ ಒಂದು ಅಂಚಿನಲ್ಲಿ, ಒಂದು ಬಗ್ಗುಬಾವಿ ಇದೆ.

ಬಗ್ಗು ಬಾವಿ ಅಂದರೆ, ಬಾವಿಗೆ ಆವರಣ ಇಲ್ಲ, ನೆಲ ಮಟ್ಟದಲ್ಲೇ ಒಂದಡಿ ಎತ್ತರದ ಕಲ್ಲುಗಳ ರಕ್ಷಣಾಗೋಡೆ ಅಷ್ಟೆ. ನಮಗೆ ಕುಡಿಯುವ ನೀರು ಮತ್ತು ಬೇರೆಲ್ಲಾ ಉದ್ದೇಶಕ್ಕೆ ಬಳಸುವ ನೀರನ್ನು ಕೊಡುವ ಬಾವಿ ಅದು. ಬೇಸಗೆಯ ತನಕವೂ ಅದರಲ್ಲಿ ನೀರುರುತ್ತಿತ್ತು. ಒಂದೊಂದು ರಾತ್ರಿ, ಆ ಬಾವಿಗೆ ದುಡುಂ ಎಂದು ಯಾರೋ ನೆಗೆದ ಸದ್ದು. ಆ ಸದ್ದು ಕೇಳಿದ ತಕ್ಷಣ, ಹಾಂ, ಕಾಣಿ, ವಾಂಟರ್ಕ ಬಾಮಿಗೆ ಹಾರಿತು ಎನ್ನುತ್ತಿದ್ದರು ನಮ್ಮ ಅಮ್ಮಮ್ಮ.

ಮನೆ ಮುಂದಿನ ಅಗೇಡಿ ಗದ್ದೆಯಿಂದಲೋ, ಬೇರೆಲ್ಲಿಂದಲೋ ನಡೆದು ಬರುವ ಆ ವಾಂಟರ್ಕಗಳು, ಅಂಗಳ ದಾಟಿ, ಬಗ್ಗುಬಾವಿಯ ಹತ್ತಿರ ಹೋಗಿ, ಮೇಲಿನಿಂದ ಬಾವಿಗೆ ನೆಗೆದಾಗ ಆಗುವ ದುಡುಂ ಸದ್ದು ಅದು. ಗದ್ದೆಯಿಂದ ಬಾವಿಗೆ, ಬಾವಿಯಿಂದ ಗದ್ದೆಗೆ ರಾತ್ರಿ ಹೊತ್ತಿನಲ್ಲಿ ನಡೆಯುವ ಅವುಗಳ ಸರ್ಕೀಟಿನ ಉದ್ದೇಶವಾದರೂ ಏನು?



ಅಗೇಡಿಯಲ್ಲಿ ಬೆಳೆಸಿದ್ದ ಬತ್ತದ ಸಸಿಯ ನಡುವೆ ಸಂಚರಿಸಿ, ತಮ್ಮದೇ ರೀತಿಯ ದಾರಿ ಮಾಡಿದ ನಂತರ, ಅಲ್ಲಿಂದ ಸುಮಾರು ನೂರು ಅಡಿ ದೂರದ ಬಾವಿಗೆ ಬರುವ ಅವುಗಳ ನಡೆಯ ಮರ್ಮವೇನು? ಅಗೇಡಿ ಮತ್ತು ಬಾವಿಯ ನಡುವೆ ಇರುವ ನುಣುಪಾದ, ಮಣ್ಣು ಹಾಕಿ ಸಾರಿಸಿದ ಅಂಗಳದ ಮೇಲೆ ನಿಧಾನವಾಗಿ ನಡೆಯುತ್ತಾ, ಬಾವಿಯ ದಿಕ್ಕಿಗೆ ಚಲಿಸಲು ಅವುಗಳಿಗೆ ದೊರೆಯುವ ಪ್ರೇರಣೆ ಅದಾವುದು? ಸರಳವಾಗಿ ಹೇಳಬೇಕೆಂದರೆ ಅದೇ ಅವುಗಳ ದಿನಚರಿ!

ಇದು ಅಗೇಡಿಯ ವಾಂಟರ್ಕಗಳ ವಿಚಾರವಾಯಿತು. ಇನ್ನು, ನಮ್ಮ ಮನೆಯ ಹಿಂದಿನ ಹಾಡಿ ಹಕ್ಕಲುಗಳಲ್ಲೂ ಬೇರೊಂದು ಪ್ರಭೇದದ ಪುಟ್ಟ ಆಮೆಗಳಿವೆ. ನಾನು ಕಾಲೇಜು ವಿದ್ಯಾಭ್ಯಾಸ ಮುಗಿಸಿ ಒಂದು ವರ್ಷ ಮನೆಯಲ್ಲೇ ಇದ್ದೆ- ನಿರುದ್ಯೋಗಿಯಾಗಿ. ಆಗೆಲ್ಲಾ ಈಗಿನಂತೆ ಪದವಿ ಮುಗಿಸಿದ ತಕ್ಷಣ ಕೆಲಸ ಸಿಗುವ ಸಂಭವವೇ ಇದ್ದಿಲ್ಲವಲ್ಲ.

ಅರ್ಜಿ ಹಾಕಿ ಕಾಯುವುದು, ಅಂಚೆಯಣ್ಣ ತರುವ ಪತ್ರಗಳನ್ನು ನಿರೀಕ್ಷಿಸುತ್ತಾ ಕೂರುವುದು ಅಂದಿನ ದಿನಚರಿ. ಆ ಏಕತಾನತೆಯನ್ನು ತೊಡೆದು ಹಾಕಲು, ಹಗಲು ಹೊತ್ತಿನಲ್ಲಿ, ಹಾಡಿ, ಹಕ್ಕಲು, ಗುಡ್ಡಗಳನ್ನು ಸುತ್ತುವುದು, ಅಲ್ಲಿನ ಹಕ್ಕಿಗಳನ್ನು ನೋಡುವುದು, ಅವುಗಳನ್ನು ಗುರುತಿಸಿ ಪುಸ್ತಕವೊಂದರಲ್ಲಿ ಗುರುತು ಮಾಡಿಕೊಳ್ಳುವುದು, ನಂತರ ಸಲೀಂ ಅಲಿಯವರ ಬುಕ್ ಆಫ್ ಇಂಡಿಯನ್ ಬರ್ಡ್ಸ್ ಪುಸ್ತಕದಲ್ಲಿ ಅವುಗಳನ್ನು ಗುರುತಿಸುವುದು- ಇದೇ ನನ್ನ ಅಂದಿನ ಪ್ರಮುಖ ಹವ್ಯಾಸ ಎನಿಸಿತ್ತು!

ಅಂಥ ಒಂದು ದಿನ, ಮನೆ ಹಿಂದಿನ ದರೆ ಹತ್ತಿ, ಗಾಣದಡಿಯ ಬೈಲಿನ ಮೇಲ್ಭಾಗದಲ್ಲಿದ್ದ ಹಕ್ಕಲಿನಲ್ಲಿ ಕುಳಿತಿದ್ದೆ. ಅಂದು ಅದು ದಟ್ಟವಾದ ಪೊದೆ ಮತ್ತು ಕುರುಚಲು ಕಾಡಿನಿಂದ ತುಂಬಿತ್ತು. ಆ ಕಾಡಿನ ನಡುವ ಒಂದು ತೊರೆಯೂ ಹರಿಯುತ್ತಿತ್ತು. ಅಲ್ಲೆಲ್ಲಾ ಅಂದು ಜನಸಂಚಾರ ಬಹಳ ಕಡಿಮೆ; ಒಂದರಿಂದ ಎರಡು ಕಿ.ಮೀ. ದೂರದ ಫಾಸಲೆಯಲ್ಲಿ ಯಾವುದೇ ಮನೆಗಳಿರಲಿಲ್ಲ, ಹಾಡಿ, ಹಕ್ಕಲು, ಗುಡ್ಡ, ಕಣಿ, ತೋಡು ಇವೇ ಅಲ್ಲಿ ಹರಡಿದ್ದವು.

ಈಚೆಗೆ ಅಲ್ಲೆಲ್ಲಾ ಮನೆಗಳಾಗಿವೆ. ಆ ಹಕ್ಕಲಿನ ನಡುವೆ ಒಂದು ಕಣಿ (ಕ'ಣಿವ') . ಎರಡೂ ಕಡೆ ದ'ಟ್ಟವಾಗಿ ಬೆಳೆದಿದ್ದ ನಾನಾ ರೀತಿಯ ಗಿಡ, ಬಳ್ಳಿಗಳು. ಯಾವುದಾದರೊಂದು ಹಕ್ಕಿ ಹಾರಿ ಬಂದು ಅಲ್ಲಿನ ಗಿಡದ ಮೇಲೆ ಕುಳಿತುಕೊಳ್ಳಬಹುದು, ಅದನ್ನು ನಾನು ಗುರುತಿಸಿಯೇನು ಎಂಬ ನಿರೀಕ್ಷೆಯಲ್ಲಿ, ಮೌನವಾಗಿ ಒಂದು ಕಲ್ಲಿನ ಮೇಲೆ ಕುಳಿತಿದ್ದೆ.

ಸುತ್ತಲಿನ ಪರಿಸರವೂ ಮೌನವಾಗಿತ್ತು. ನಡು ಹಗಲಿನ ಹೊತ್ತು. ಆದರೂ, ಅಲ್ಲಿ ಬಿರುಸಾದ ಬಿಸಿಲು ಇರಲಿಲ್ಲ, ಎಲೆಗಳು ಅಲುಗದಂಥ ನಿಶ್ಶಬ್ದ ವಾತಾವರಣ. ಆಗ, ನಿಧಾನವಾಗಿ ನೆಲದ ಮೇಲಿನ ದರಲೆಯ (ತರಗಲೆ) ನಡುವೆ ಪರಪರ ಸದ್ದಾಯಿತು.

ಸದ್ದು ಬಂದತ್ತ ನೋಡಿದರೆ, ಮೊದಲಿಗೆ ಏನೂ ಕಾಣಲಿಲ್ಲ. ನಂತರ ಕಂಡಿತು, ಮಸುಕು ಕಲ್ಲಿನ ಬಣ್ಣದ, ಅರ್ಧ ಅಡಿ ಅಗಲದ ಸಣ್ಣ ಆಮೆ, ತೆವಳಿಕೊಂಡು ಸಾಗುತ್ತಿದೆ! ಅದರ ಮೇಲೆ ಮಬ್ಬಾಗಿ ನಕ್ಷತ್ರಾಕಾರದ ಗುರುತುಗಳು. ನಾನು ಮೌನವಾಗಿಯೇ ಕುಳಿತು, ಅದನ್ನೇ ಗಮನಿಸುತ್ತಾ, ಆ ಜೀವಿಯ ವಿವರಗಳನ್ನು ತಿಳಿಯಲು ಯತ್ನ ನಡೆಸುತ್ತಿದೆ.

ಅದು ಆಮೆ ವೇಗದಿಂದ ನಡೆಯುತ್ತಾ, ತರಗಲೆಗಳ ಸಂದಿಯಲ್ಲಿ ತುಸುದೂರ ಸಾಗಿ, ಹಕ್ಕಲಿನ ದಟ್ಟ ನೆರಳಿನಲ್ಲಿ, ಇನ್ನೊಂದು ಪ್ರದೇಶದ ತರಗಲೆಗಳ ನಡುವೆ ಮಾಯವಾಯಿತು. ಗದ್ದೆಯ ನೀರಿನಲ್ಲಿ, ಬಾವಿಯ ಕಲ್ಲಿನ ಸಂದಿಯಲ್ಲಿ ಮಾತ್ರ ಆಮೆಗಳನ್ನು ಕಂಡಿದ್ದ ನನಗೆ, ನಮ್ಮೂರಿನ ಕಾಡು ಪ್ರದೇಶದಲ್ಲೂ ಆಮೆಗಳಿವೆ ಎಂದು ತಿಳಿದಾಗ ವಿಸ್ಮಯ ಎನಿಸಿತ್ತು.

ನೀರಿನಿಂದ ಬಹುದೂರ ಎನಿಸುವ ಆ ಜಾಗದಲ್ಲಿದ್ದ ಆ ಪುಟಾಣಿ ಆಮೆಯು, ಕಣಿಯತ್ತ ಸಾಗಿತ್ತು. ಬಹುಶಃ ಅಲ್ಲೆಲ್ಲೋ ನೀರಿನ ಪಸೆ ಇದ್ದಿರಬಹುದು ಅಥವಾ ಅದರ ವಾಸಸ್ಥಳ ಇರಬಹುದು ಎಂದು ಕೊಂಡೆ. ಆಮೆಗಳು ನೀರಿನ ಸನಿಹ ಮಾತ್ರ ಇರುತ್ತವೆ ಎಂಬ ಭಾವನೆ ನನ್ನಲ್ಲಿತ್ತು; ಬೆಟ್ಟ ಗುಡ್ಡಗಳಲ್ಲೂ, ನೀರಿನಿಂದ ಬಹು ದೂರ ಇಂಥ ಆಮೆಗಳಿರುತ್ತವೆ ಎಂಬ ಹೊಸ ವಿಚಾರವನ್ನು ಕಂಡು ಕೊಂಡ ಬೆರಗು ನನ್ನಲ್ಲಿ.

ಕೆಲವು ದಿನಗಳ ನಂತರ ಗಾಣದಡಿಯ ದ್ಯಾವಣ್ಣ ನಾಯಕನು ಮಾತಿಗೆ ಸಿಕ್ಕಿದಾಗ, ಈ ರೀತಿ ನೀರಿನಿಂದ ಬಹುದೂರದಲ್ಲಿ, ಅವನ ಮನೆಯ ಹಿಂಭಾಗದ ಹಕ್ಕಲಿನಲ್ಲೂ ಪುಟ್ಟ ಆಮೆಗಳಿವೆ ಗೊತ್ತಾ ಎಂದು ಅಚ್ಚರಿಯಿಂದ ಕೇಳಿದೆ. ಸದಾ ಕಾಡು, ಹಾಡಿ, ಹಕ್ಕಲು, ಗುಡ್ಡಗಳಲ್ಲಿ ಓಡಾಡುವ ಅವನಿಗೆ ಅದೊಂದು ಹೊಸ ವಿಚಾರವೇ ಆಗಿರಲಿಲ್ಲ. ಓ ಅದಾ, ಅದೂ ಒಂದು ನಮೂನಿ ವಾಂಟರ್ಕ ಮಾರಾಯ್ರೆ. ಸುಟ್ಟು ತಿಂದರೆ ಬಹಳ ರುಚಿ ಎಂದು ನಕ್ಕ! ಅವನ ಮಾನದಂಡದಲ್ಲಿ ಯಾವ ಆಮೆ ಹೆಚ್ಚು ರುಚಿ ಎಂಬುದೇ ಪ್ರಮುಖ ಸ್ಥಾನ ಪಡೆದಿತ್ತು.

– ಶಶಿಧರ ಹಾಲಾಡಿ

ವಾಂಟರ್ಕ ಎಂದರೆ ಪುಟ್ಟ ಆಮೆ!

- ಸಿಹಿನೀರಿನಲ್ಲಿ ವಾಸಿಸುವ ಈ ಆಮೆಗಳು, ರಾತ್ರಿ ಹೊತ್ತಿನಲ್ಲಿ ಅಗೇಡಿಯಲ್ಲಿ ಅತ್ತಿಂದಿತ್ತ ಓಡಾಡಿ ಮಾಡಿದ ಆ ದಾರಿಯನ್ನು ಬೆಳಗಿನ ಹೊತ್ತಿನಲ್ಲಿ ನೋಡುವ ಅನುಭವ ವಿಶಿಷ್ಟ.
- ಭತ್ತದ ಸಸಿ ತುಂಬಿರುವ ಅಗೇಡಿಯ ಹಸಿರು ಕ್ಯಾನ್‌ವಾಸಿನ ಮೇಲೆ ಅದಾರೋ ಪ್ರಕೃತಿ ಪ್ರೇಮಿ, ನೀರವ ರಾತ್ರಿಯಲ್ಲಿ ಸಂಚರಿಸುತ್ತಾ, ವಿಶಿಷ್ಟ ಅರ್ಥ ನೀಡುವ ಒಂದು ರೇಖಾಚಿತ್ರ ಬರೆದಂತಿರುತ್ತದೆ.
- ಈ ವಾಂಟರ್ಕ ಎಂಬ ಆಮೆಗಳು ಸಾಮಾನ್ಯವಾಗಿ ನಿಶಾಚರಿಗಳು.
- ಅರ್ಧ ಅಡಿಯಿಂದ ಒಂದಡಿ ಉದ್ದದ, ಹಸಿರು ದೇಹದ ಆ ಆಮೆಗಳು, ತಮ್ಮ ಚಿಪ್ಪಿನಿಂದ ತಲೆಯನ್ನು ಹೊರಗೆ ಹಾಕಿ ನೋಡುವ ರೀತಿಯೇ ವಿಭಿನ್ನ, ಕಾವ್ಯಾತ್ಮಕ.
- ನಮ್ಮೂರಿನ ಕೆಲವು ರೈತರು ಅವುಗಳನ್ನು ಆಗಾಗ ಹಿಡಿಯುವುದುಂಟು, ಪದಾರ್ಥ ಮಾಡಲು!
- ಈ ಪುಟ್ಟ ಆಮೆಗಳು ನಿಶಾಚರಿಗಳು ಎಂದೆನಲ್ಲ, ಅದಕ್ಕೆ ನಮಗೆ ಒಮ್ಮೊಮ್ಮೆ ಪುರಾವೆ ದೊರೆಯುತ್ತಿತ್ತು!
- ಅದು ವಿದ್ಯುತ್ ಇಲ್ಲದ ಕಾಲ.

20-12-2025 ದಿನ ಭವಿಷ್ಯ

ಮೇಷ: ನಿಮ್ಮ ಕಚೇರಿಯನ್ನು ಬೇಗನೆ ಬಿಡಲು ಮತ್ತು ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ಕೆಲವುಪ್ರಮುಖಯೋಜನೆಗಳನ್ನುಕಾರ್ಯಗತಗೊಳಿಸಲಾಗುತ್ತದೆ ಹಾಗೂ ಅವು ನಿಮಗೆ ಹೊಸ ಆರ್ಥಿಕ ಲಾಭ ತರುತ್ತವೆ. ನಿಮಗೆ ಗೊತ್ತಿದ್ದ ಯಾರಾದರೂ ಹಣಕಾಸಿಗೆ ಸಂಬಂಧಿಸಿದ ವಿಷಯಗಳಿಗೆ ಅತಿಯಾಗಿ ಪ್ರತಿಕ್ರಿಯಿಸಬಹುದು.

ವೃಷಭ: ಸ್ವಯಂ ಸುಧಾರಣೆಯ ಯೋಜನೆಗಳು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಫಲ ನೀಡುತ್ತವೆ - ನಿಮ್ಮ ಬಗ್ಗೆ ನಿಮಗೇ ಒಳ್ಳೆಯದೆನಿಸುತ್ತದೆ ಮತ್ತು ವಿಶ್ವಾಸ ಮೂಡುತ್ತದೆ. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ, ಆದರೆ ಇದರೊಂದಿಗೆ ನೀವು ದಾನವನ್ನು ಸಹ ಮಾಡಬೇಕು ಏಕೆಂದರೆ ಇದರಿಂದ ನಿಮಗೆ ಮಾನಸಿಕ ಶಾಂತಿ ಸಿಗುತ್ತದೆ.

ಮಿಥುನ: ಹೊರಾಂಗಣ ಚಟ

ಅಜ್ಞಾನಿಯಾದವನು ಎಂದಿಗೂ ಯಶಸ್ಸಿನ ಶಿಖರ ತಲುಪಲ್ಲ

ಮನುಷ್ಯನ ಬದುಕಿಗೆ ಜ್ಞಾನ ಪ್ರಮುಖ, ಪಡೆದವನು ಮೋಕ್ಷ ಪಡೆಯುತ್ತಾನೆ: ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು

• ಪ್ರಜೋದಯ ವರದಿ

ಆಲೂರು: ಜ್ಞಾನಕ್ಕಿಂತ ಪವಿತ್ರವಾದದ್ದು ಬೇರೊಂದಿಲ್ಲ, ಮನುಷ್ಯನ ಬದುಕಿಗೆ ಜ್ಞಾನವು ಪ್ರಮುಖವಾದುದು ಜ್ಞಾನವನ್ನು ಜೀವನದ ಸಾರವೆಂದು ಪರಿಗಣಿಸಲಾಗುತ್ತದೆ. ಅದನ್ನು ಪಡೆದುಕೊಂಡವನು ಮೋಕ್ಷವನ್ನು ಪಡೆಯುತ್ತಾನೆ. ಮತ್ತೊಂದೆಡೆ, ಅಜ್ಞಾನಿಯಾಗಿ ಉಳಿಯುವವನು ಎಂದಿಗೂ ಯಶಸ್ಸಿನ ಶಿಖರವನ್ನು ತಲುಪಲು ಸಾಧ್ಯವಿಲ್ಲ ಎಂದು ಉತ್ತರ ಪ್ರದೇಶ ಕಾಶಿ ಪೀಠದ ಶ್ರೀಮತ್ಷಾಶೀ ಜ್ಞಾನ ಸಿಂಹಾಸನಾಧೀಶ್ವರ ಶ್ರೀ 1008 ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ತಾಲ್ಲೂಕಿನ ಪಾಳ್ಯ ಹೋಬಳಿ ಕಾರ್ಜುವಳ್ಳಿಯಲ್ಲಿರುವ ಶ್ರೀಮದ್ ರಂಭಾಪುರಿ ವೀರಾ ಸಿಂಹಾಸನ ಶಾಖಾ ಶ್ರೀ ಸಂಸ್ಥಾನ ಹಿರೇಮಠದಲ್ಲಿ ಲಿಂಗೈಕ್ಯ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳವರ 47 ನೇ ವರ್ಷದ ಪುಣ್ಯ ಸ್ಮರಣೋತ್ಸವ ಹಾಗೂ ಪ್ರಸ್ತುತ ಶ್ರೀಗಳವರ ಪಟ್ಟಾಧಿಕಾರದ ಐದನೇ ವಾರ್ಷಿಕೋತ್ಸವ- ಜನ್ಮವರ್ಧಂತಿ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಜ್ಞಾನ ವೈಭವಂ ಧರ್ಮ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಜ್ಞಾನಕ್ಕಿಂತ ಮಿಗಿಲಾದುದು ಮತ್ತು ಪವಿತ್ರವಾದುದು ಇನ್ನೊಂದಿಲ್ಲ. ಜ್ಞಾನವೊಂದು ಸಾರ್ವತ್ರಿಕ ಶಕ್ತಿಯಾಗಿದೆ. ಶಿಕ್ಷಣದ ಪ್ರಮುಖ ಗುರಿ ಜ್ಞಾನಾರ್ಜನೆಯಾಗಿದೆ. ಜ್ಞಾನದಿಂದ ವ್ಯಕ್ತಿಯ ಬದುಕಿನ ಎಲ್ಲ ಕ್ಷೇತ್ರಗಳನ್ನು ಬೆಳಗಿಸಬಹುದಾಗಿದೆ. ಹೀಗಾಗಿ ಮನುಷ್ಯನ ಸರ್ವತೋಮುಖ ಬೆಳವಣಿಗೆಗೆ ಜ್ಞಾನ ಅವಶ್ಯಕವಾಗಿದೆ. ಮಠಮಾನ್ಯಗಳು ಇಂದು ಭಕ್ತರ ಏಳಿಗೆಗೆ ಶ್ರಮಿಸುವುದರ ಜತೆಗೆ ಸಮಾಜದಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಮಾಡುತ್ತಿವೆ. ಇದಕ್ಕೆ ಉದಾಹರಣೆಯಾಗಿ ಶ್ರೀ ಸಂಸ್ಥಾನ ಕಾರ್ಜುವಳ್ಳಿಯ ಹಿರೇಮಠ ಸಾಕ್ಷಿಯಾಗಿದೆ. ಹುಟ್ಟಿದ ಪ್ರತಿಯೊಬ್ಬ ಮನುಷ್ಯ ಸಂಸ್ಕಾರವಂತನಾಗಿರಬೇಕು, ಗುರು ಹಿರಿಯರಿಗೆ ಗೌರವ ಕೊಡಬೇಕು, ತಂದೆ-ತಾಯಿಯನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು. ಇಂತಹ ಸಂಸ್ಕಾರ ಇಲ್ಲದಿದ್ದರೆ ಆತನ ಜೀವನ ಸುಖಕರವಾಗಿ, ಆರೋಗ್ಯಕರವಾಗಿ ಇರುವುದಿಲ್ಲ ಎಂದು ಹೇಳಿದರು.

ಶ್ರೀ ಸಂಸ್ಥಾನ ಹಿರೇಮಠದ ಪೀಠಾಧ್ಯಕ್ಷರಾದ ಶ್ರೀ ಸದಾಶಿವ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ, ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕ್ತಿ ಎಂಬ ಮಾತಿನಂತೆ ಗುರು ಪ್ರಪಂಚದಲ್ಲೇ ಶ್ರೇಷ್ಠ ವ್ಯಕ್ತಿ. ಗುರುವಿನ ಸೇವೆ ಮಾಡಿದಾಗ ಮಾತ್ರ ಮೋಕ್ಷ ಪ್ರಾಪ್ತಿಯಾಗುವುದಲ್ಲದೆ ಜೀವನ ಸಾರ್ಥಕವಾಗುತ್ತದೆ. ದೇವರು ಜೀವಿಯನ್ನು ಸೃಷ್ಟಿಸಿದರೆ ಗುರು ಆ ಜೀವದಲ್ಲಿ ಜ್ಞಾನದ ಬೀಜ ಬಿತ್ತಿ ಅಜ್ಞಾನದ ಕತ್ತಲೆಯನ್ನು ದೂರ ಮಾಡುತ್ತಾನೆ. ದೇವರು ಕಣ್ಣಿಗೆ ಕಾಣಿಸುವುದಿಲ್ಲ. ಆದರೆ ಗುರು ಶಿಷ್ಯರ ಮುಂದೆ ಇದ್ದು ಎಲ್ಲವನ್ನು ವಿಕ್ಷೀಸುತ್ತಾನೆ. ಅಗತ್ಯ ಬಿದ್ದರೆ ಮಾರ್ಗದರ್ಶನವೂ ಮಾಡುತ್ತಾನೆ. ಪ್ರತಿಯೊಬ್ಬರು ತಮ್ಮ ಗುರಿ ಮುಟ್ಟಬೇಕಾದರೆ ಗುರುವಿನ ಮಾರ್ಗದರ್ಶನ ಬೇಕು, ಜಗತ್ತಿನಲ್ಲಿಯೇ ಗುರು ಶ್ರೇಷ್ಠ ಜೀವಿ. ಗುರುವಿನ ಸೇವೆ ಮಾಡಿದಾಗ ಮಾತ್ರ ನಮ್ಮ ಜೀವನ ಸಾರ್ಥಕವಾಗುತ್ತದೆ. ಗುರುವಿನ ಕೃಪೆಯಾದಾಗ ಮಾತ್ರ ನಮಗೆ ಜ್ಞಾನ ದೊರೆಯಲು ಸಾಧ್ಯ. ಗುರು ಎಂದರೆ ಜ್ಞಾನ ಚಿಲುಮೆ ಇದ್ದಂತೆ ಎಂದರು.

ಶ್ರೀಮಠದಲ್ಲಿ ಹಿರಿಯ ಶ್ರೀಗಳವರ ಸನ್ನಿಧಿಯಲ್ಲಿ ಕ್ಷೀರಾಭಿಷೇಕ, ಅಷ್ಟೋತ್ತರ ಅರ್ಚನೆ, ಮಹಾನೈವೇದ್ಯ, ಮಹಾ ಮಂಗಳಾರತಿ, ಆದಿತ್ಯ ಹೃದಯ ಸ್ತೋತ್ರ ಪಾರಾಯಣ. ಲಿಂಗೈಕ್ಯ ಶ್ರೀ ಷ.ಬ್ರ.ರುದ್ರಮುನಿ ಶಿವಾಚಾರ್ಯ ಸ್ವಾಮಿಗಳವರ 47 ನೇ ವರ್ಷದ ಪುಣ್ಯಾರಾಧನೆಯ ಅಂಗವಾಗಿ ಶ್ರೀಗಳವರ ಕರ್ತೃ ಗದ್ದುಗೆಗೆ ಮಹಾ ರುದ್ರಾಭಿಷೇಕ, ರುದ್ರಾಕ್ಷಿ ಕಿರೀಟ ಧಾರಣೆ, ಬಿಲ್ವಪತ್ರಾರ್ಚನೆ, ಮಹಾನೈವೇದ್ಯ, ಮಹಾಮಂಗಳಾರತಿ ನಡೆದವು.

ಹಾಸನ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮಿಗಳು, ಕೊಡ್ಲಿಪೇಟೆ ಕಲ್ಮಠದ ಶ್ರೀ ಮಹಾಂತ ಸ್ವಾಮಿಗಳು, ತಪೋಕ್ಷೇತ್ರ ಮನೆಹಳ್ಳಿ ಶ್ರೀ ಮಹಾಂತ ಶಿವಲಿಂಗ ಸ್ವಾಮಿಗಳು, ಹಾಸನ ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮಿಗಳು, ಶಿಡಿಗಳಲೆ ಶ್ರೀ ಇಮ್ಮಡಿ ಶಿವಲಿಂಗ ಸ್ವಾಮಿಗಳು, ಎಸ್.ಮಹೇಶ್ ಚಿಕ್ಕೋಟೆ, ಬಿ.ಎಸ್. ಮಲ್ಲಿಕಾರ್ಜುನ್, ನಟರಾಜ್ ನಾಕಲಗೂಡು, ಅಡಗೂರು ಬಸವರಾಜು, ವೈದ್ಯಾಧಿಕಾರಿ ಡಾ.ಸತೀಶ್, ಇನ್ನಿತರರು ಹಾಜರಿದ್ದರು.

ಸಾಲದ ಹಣ ನಿಗದಿತ ಉದ್ದೇಶಕ್ಕೆ ಬಳಸಿಕೊಂಡಲ್ಲಿ ಯಶಸ್ಸು ಸಾಧ್ಯ

• ಪ್ರಜೋದಯ ವರದಿ

ಅರಕಲಗೂಡು: ಸ್ವ ಉದ್ಯೋಗ ಕೈಗೊಳ್ಳಲು ಪಡೆಯವ ಸಾಲದ ಹಣವನ್ನು ನಿಗದಿತ ಉದ್ದೇಶಕ್ಕೆ ಬಳಸಿಕೊಂಡಾಗ ಮಾತ್ರ ಉದ್ಯಮವನ್ನು ಯಶಸ್ವಿಯಾಗಿ ಮುನ್ನೆಡೆಸುವ ಜತೆಗೆ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಯೋಜನಾಧಿಕಾರಿ ಯಶೋಧ ಶೆಟ್ಟಿ ತಿಳಿಸಿದರು.

ಪಟ್ಟಣದ ದೇವರಾಜ ಅರಸು ಭವನದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ.ಟ್ರಸ್ಟ್ ಇತ್ತೀಚೆಗೆ ಸ್ವಸಹಾಯ ಸಂಘಗಳ ಸ್ವ ಉದ್ಯೋಗ ಕೈಗೊಳ್ಳುವವರಿಗೆ ಹಮ್ಮಿಕೊಂಡಿದ್ದ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಸ್ವ ಉದ್ಯೋಗ ಕೈಗೊಳ್ಳುವವರಿಗೆ ಅಗತ್ಯವಾದ ಕೌಶಲ್ಯ ರೂಪಿಸಿಕೊಳ್ಳಲು ನೆರವಾಗುವ ಉದ್ದೇಶದಿಂದ ಈ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಇದರ ಉಪಯೋಗ ಪಡೆಯುವಂತೆ ತಿಳಿಸಿದರು.

ಸಂಸ್ಥೆಯ ಪ್ರಾದೇಶಿಕ ಕಚೇರಿ ಕೌಶಲ್ಯ ವಿಭಾಗದ ಯೋಜನಾಧಿಕಾರಿ ಪ್ರವೀಣ್‌ಕುಮಾರ್ ಸಾಲ ಯೋಜನೆ, ಪಡೆಯುವ ವಿಧಾನ, ದೊರೆಯುವ ಅನುಕೂಲತೆಗಳ ಕುರಿತು ಮಾಹಿತಿ ನೀಡಿದರು. ಕೃಷಿ ಮೇಲ್ವಿಚಾರಕ ಸುನಿಲ್ ಕುಮಾರ್, ಸೇವಾ ಪ್ರತಿನಿಧಿ ಬೇಬಿ ಇತರರು ಉಪಸ್ಥಿತರಿದ್ದರು.

ಜೂಜು ಅಡ್ಡೆ ಮೇಲೆ ದಾಳಿ: 17 ಜನರ ಸೆರೆ

ಹಾಸನ: ನಗರದ ಪೆನ್ಷನ್ ಮೊಹಲ್ಲಾ ಠಾಣೆ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ಜೂಜು ಅಡ್ಡೆ ಮೇಲೆ ದಾಳಿ ನಡೆಸಿರುವ ಪೊಲೀಸರು 17 ಜನರನ್ನು ಬಂಧಿಸಿದ್ದು ಪಣಕ್ಕಿಟ್ಟಿದ್ದ 65 ಸಾವಿರ ರೂ. ನಗದು, 20 ಮೊಬೈಲ್, 2 ಸ್ಕೂಟಿ ಹಾಗು 2 ಆಟೋಗಳನ್ನು ವಶಕ್ಕೆ ಪಡೆದಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಎಸ್‌ಐ ಸ್ವಾಮಿನಾಥ್, ಪಿ.ಎಸ್.ಐ. ಕೇಶವ ಪ್ರಸಾದ್ ಹಾಗು ತಂಡ ದಾಳಿ ನಡೆಸಿತ್ತು.

ನಂದೀಶ್ ನಿಧನ

ಆಲೂರು: ಪಟ್ಟಣದ ಹೌಸಿಂಗ್‌ಬೋರ್ಡ್ ನಿವಾಸಿ ನಿವೃತ್ತ ಸೈನಿಕ ದಿ. ಎಸ್. ಎಂ. ಪರಮೇಶ್ವರ ಅವರ ಪುತ್ರ ಎಸ್.ಪಿ. ನಂದೀಶ್ (52) ಅವರು ಅನಾರೋಗ್ಯದಿಂದ ಶುಕ್ರವಾರ ನಿಧನರಾದರು.

ಸಾರ್ವಜನಿಕ ಹಿತಾಸಕ್ತಿಗಳಲ್ಲಿ ರಾಜಕೀಯ ಸರಿಯಲ್ಲ; ಸರ್ಕಾರಕ್ಕೆ ಹೈಕೋರ್ಟ್ ಕಟುಮಾತು

ಜನೌಷಧಿ ಕೇಂದ್ರ ಮುಚ್ಚುವ ಆದೇಶ ರದ್ದು

• ಪ್ರಜೋದಯ ವರದಿ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜನೌಷಧಿ ಕೇಂದ್ರಗಳ ಬಂದ್ ಮಾಡುವಂತೆ ರಾಜ್ಯ ಸರ್ಕಾರ ನೀಡಿದ್ದ ಆದೇಶವನ್ನು ಕರ್ನಾಟಕ ಹೈಕೋರ್ಟ್ ರದ್ದುಗೊಳಿಸಿದ್ದು, ಸಾರ್ವಜನಿಕ ಹಿತಾಸಕ್ತಿಯಲ್ಲಿ ರಾಜಕೀಯ ಇರಬಾರದು ಎಂದು ಕಟುವಾಗಿ ಹೇಳಿದೆ.

ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ, ಮೇ 14, 2025 ಹಾಗೂ ಆಗಸ್ಟ್ 2, 2025ರಂದು ಜನೌಷಧಿ ಕೇಂದ್ರಗಳಿಗೆ ನೀಡಿದ್ದ ಅನುಮತಿಯನ್ನು ಹಿಂಪಡೆದು, ಆಸ್ಪತ್ರೆಗಳ ಆವರಣ ಖಾಲಿ ಮಾಡುವಂತೆ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶಗಳ ವಿರುದ್ಧ ಸಲ್ಲಿಸಲಾದ ಅರ್ಜಿಗಳ ವಿಚಾರಣೆ ನಡೆಸಿದರು.

ಜನೌಷಧಿ ಕೇಂದ್ರಗಳು ಕಳೆದ 5 ರಿಂದ 7 ವರ್ಷಗಳ ಕಾಲ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿವೆ, ಇದು ಅವುಗಳ ಅಗತ್ಯತೆಯನ್ನು ಸ್ಪಷ್ಟಪಡಿಸುತ್ತದೆ. ಯಾವುದೇ ಸಾರ್ವಜನಿಕ ಹಾನಿ ಅಥವಾ ಕಾನೂನು ಉಲ್ಲಂಘನೆ ನಡೆದಿರುವುದನ್ನು ಸರ್ಕಾರ ಸಾಬೀತು ಪಡಿಸಿಲ್ಲ ಎಂದು ಹೇಳಿದೆ.

ಸಂಸ್ಥಾತ್ಮಕ ಅಹಂಕಾರದ ಸಂಘರ್ಷದಲ್ಲಿ ನಾಗರಿಕರೇ ತೊಂದರೆ ಅನುಭವಿಸುತ್ತಾರೆ. ಇಂತಹ ಪರಿಸ್ಥಿತಿಗಳನ್ನು ತಡೆಯುವುದೇ ಸಂವಿಧಾನಾತ್ಮಕ ನ್ಯಾಯಾಲಯಗಳ ಕರ್ತವ್ಯ. ಗೊಂದಲದಿಂದ ಹುಟ್ಟಿದ ಹಾಗೂ ಆತುರದಲ್ಲಿ



ಜಾರಿಗೆ ತಂದ ಆದೇಶಗಳು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿವೆ ಎಂದು ಕಟುವಾಗಿ ನುಡಿದಿದೆ.

ಜನೌಷಧಿ ಕೇಂದ್ರಗಳು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಕಡಿಮೆ ದರದಲ್ಲಿ ಗುಣಮಟ್ಟದ ಜನರಿಕ್ ಔಷಧಿಗಳನ್ನು ಸಾರ್ವಜನಿಕರಿಗೆ ಒದಗಿಸುವುದು ಇದರ ಉದ್ದೇಶ. ಏಳು ವರ್ಷಗಳಿಂದ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿರುವ ಕೇಂದ್ರಗಳ ವಿರುದ್ಧ ಒಂದು ದೂರು ಸಹ ಇಲ್ಲ, ಇದು ಅರ್ಜಿದಾರರ ನ್ಯಾಯಸಮ್ಮತ ನಿರೀಕ್ಷೆಯನ್ನು ಬಲಪಡಿಸುತ್ತದೆ. ಅಷ್ಟಕ್ಕೂ ಇಂತಹ ಕೇಂದ್ರಗಳು ಹೇಗೆ ಹಾನಿಕಾರಕವಾಗಿವೆ ಎಂಬುದನ್ನು ವಿಷಧ ಪಡಿಸುವಲ್ಲಿ ರಾಜ್ಯ ಸರ್ಕಾರವು ವಿಫಲವಾಗಿದೆ ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

ಇದೇ ವೇಳೆ ರಾಜ್ಯ ಸರ್ಕಾರ ಹೊರಡಿಸಿದ್ದ ಎರಡೂ ಆದೇಶಗಳನ್ನು ಹೈಕೋರ್ಟ್ ಸಂಪೂರ್ಣವಾಗಿ ರದ್ದುಪಡಿಸಿದೆ.

ಪೊಲೀಸ್ ಠಾಣೆ ಜನಸ್ನೇಹಿಯಾಗಿಸಲು ತೆರೆದ ಮನೆ

• ಪ್ರಜೋದಯ ವರದಿ

ಅರೇಹಳ್ಳಿ: ಮಕ್ಕಳಿಗೆ ಯಾವುದಾದರೂ ದೌರ್ಜನ್ಯ ಅಥವಾ ಅಪರಾಧವೆಂದು ಮನವರಿಕೆಯಾದಾಗ ಪೊಲೀಸರ ಸಹಾಯ ಪಡೆಯಲು ಪೊಲೀಸ್ ಠಾಣೆ ಮೆಟ್ಟಿಲೇರುವಂತಾಗಬೇಕು ಆಗಲೇ ಠಾಣೆಯಲ್ಲಿ ಜನಸ್ನೇಹಿ ವಾತಾವರಣ ಸೃಷ್ಟಿಸಲು ಸಾಧ್ಯ ಎಂದು ಅರೇಹಳ್ಳಿ ಠಾಣಾಧಿಕಾರಿ ಯೋಗಾಬರಂ ಅವರು ಹೇಳಿದರು.

ಅರೇಹಳ್ಳಿ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ತೆರೆದ ಮನೆ ಕಾರ್ಯಕ್ರಮದಲ್ಲಿ ಪಟ್ಟಣದ ಎಸ್.ಮಾನಸ ಶಾಲೆಯ ವಿದ್ಯಾರ್ಥಿಗಳನ್ನು ಠಾಣೆಗೆ ಆಹ್ವಾನಿಸಿ, ಪೊಲೀಸರ ಕರ್ತವ್ಯಗಳು ಹಾಗು ಕಾನೂನಿನ ಅರಿವನ್ನು ಮೂಡಿಸಲಾಯಿತು. ಈ ವೇಳೆ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಮಾತನಾಡಿದ ಅವರು, ಇಂದಿನ ಮಕ್ಕಳೇ ಭವಿಷ್ಯದ ನಾಗರಿಕರು. ಮಕ್ಕಳು ಜಾಗೃತರಾದರೇ, ಅವರ ಮನೆ ಕುಟುಂಬ ಮತ್ತು ಸುತ್ತಮುತ್ತಲಿನ ಪರಿಸರವು ಜಾಗೃತಿಯಾಗುತ್ತದೆ. ನಿಮ್ಮ ಸುತ್ತಮುತ್ತಲಿನಲ್ಲಿ ಬಾಲ್ಯ ವಿವಾಹ, ಲೈಂಗಿಕ ದೌರ್ಜನ್ಯ, ಅಥವಾ ಯಾವುದಾದರೂ ಅಪರಾದ ಚಟುವಟಿಕೆಗಳ ಬಗ್ಗೆ ನಿಖರತೆ ಕಂಡುಬಂದಲ್ಲಿ ನಮಗೆ ತಿಳಿಸಬೇಕು ಆಗ ಮಾತ್ರ ಉತ್ತಮ ಸಮಾಜ ನಿರ್ಮಿಸಲು ಸಾಧ್ಯ ಎಂದು ತಿಳಿಸಿದರು.

ಪೊಲೀಸರು ಎಂದರೆ ಸಾಮಾನ್ಯವಾಗಿ ಮಕ್ಕಳು ಭಯಪಡುವುದು ಸಹಜ. ಅದನ್ನು ಹೋಗಲಾಡಿಸುವ ಉದ್ದೇಶದಿಂದ ತೆರೆದ ಮನೆ ಎಂಬ ಕಾರ್ಯಕ್ರಮವನ್ನು ಪರಿಪೂರ್ಣವಾಗಲು ಸಾಧ್ಯ ಎಂದು ಹೇಳಿದರು.

ಕಷ್ಟಗಳನ್ನು ಧೈರ್ಯದಿಂದ ಎದುರಿಸಬೇಕು

• ಪ್ರಜೋದಯ ವರದಿ

ಸಕಲೇಶಪುರ: ಜೀವನದಲ್ಲಿ ಎಂತಹ ಕಷ್ಟಗಳು ಎದುರಾದರೂ ಎದೆಗುಂದದೆ ಧೈರ್ಯದಿಂದ ಎದುರಿಸಬೇಕು ಎಂದು ಹಿರಿಯ ಕ್ರೀಡಾಪಟು ದಿನೇಶ್ ಅವರು ಹೇಳಿದರು.

ಪಟ್ಟಣದ ಸುಭಾಷ್ ಮೈದಾನದಲ್ಲಿ ಗುರುವಾರ ನಿಧನರಾದ ಹೆಸರಾಂತ ಕ್ರಿಕೆಟ್ ಪಟು ಮಳಲಿ ವಿಜಿ ಅವರಿಗೆ ಮಾರ್ನಿಂಗ್ ಬಾಯ್ಸ್ ತಂಡದ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಿದ ಬಳಿಕ ಅವರು ಮಾತನಾಡಿ, ನಮ್ಮ ತಂಡದ ಆಟಗಾರರಾಗಿದ್ದ ಮಳಲಿ ವಿಜಿ ಅವರು ಟೆನ್ನಿಸ್‌ಬಾಲ್ ಕ್ರಿಕೆಟ್‌ನಲ್ಲಿ ತಾಲ್ಲೂಕು ಮಟ್ಟಕ್ಕೆ ಸೀಮಿತವಾಗದೆ, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿಯೂ ಹೆಸರು ಮಾಡಿದ್ದ ಕ್ರೀಡಾಪಟುವಾಗಿದ್ದರು ಎಂದು ಸ್ಮರಿಸಿದರು.

ಬ್ಯಾಟಿಂಗ್, ಬೌಲಿಂಗ್ ಮಾತ್ರವಲ್ಲದೆ ಫೀಲ್ಡಿಂಗ್‌ನಲ್ಲಿಯೂ ವಿಜಿ ಅವರು ಅಪಾರ ಹೆಸರು ಗಳಿಸಿದ್ದರು. ದಿನನಿತ್ಯ ನಮ್ಮೊಂದಿಗೆ ಕ್ರಿಕೆಟ್ ಆಡುತ್ತಿದ್ದ ವಿಜಿ ಅವರು ಇಂದು ನಮ್ಮೊಂದಿಗಿಲ್ಲ ಎಂಬುದನ್ನು ನಂಬಲು ಸಾಧ್ಯವಾಗುತ್ತಿಲ್ಲ. ಅವರು ದೈಹಿಕವಾಗಿ ನಮ್ಮಿಂದ ದೂರವಾಗಿರಬಹುದು, ಆದರೆ ಮಾನಸಿಕವಾಗಿ ಸದಾ ನಮ್ಮೊಂದಿಗೇ ಇರುತ್ತಾರೆ ಎಂದು ದಿನೇಶ್ ಹೇಳಿದರು.

ಯಾರೂ ಸಹ ಆತ್ಮಹತ್ಯೆಯಂತಹ ಕಠಿಣ ನಿರ್ಧಾರ ಕೈಗೊಳ್ಳಬಾರದು. ಅದರಲ್ಲೂ ಕ್ರೀಡಾಪಟುಗಳು ಜೀವನದಲ್ಲಿ ಎದುರಾಗುವ ಸವಾಲುಗಳನ್ನು ಧೈರ್ಯದಿಂದ ಎದುರಿಸಬೇಕು ಎಂದು ಅವರು ಮನವಿ ಮಾಡಿದರು.

ಮಾರ್ನಿಂಗ್ ಬಾಯ್ಸ್ ತಂಡದ ಆಟಗಾರರಾದ ರಘು (ಕೊಪ್ಪಲು), ನಿಶ್ಚಯ್, ಮಹೇಂದ್ರ, ಅಂಬಾರಿ, ಶಿವಶಂಕರ್, ಬೋಲ್ಟ್, ಗೋವಿಂದ, ಪ್ರತಾಪ್ ಉಪಸ್ಥಿತರಿದ್ದರು.

ಡಿ.23 ರಂದು ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ

ಹಾಸನ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಅಥವಾ ಕಲೋತ್ಸವ ಕಾರ್ಯಕ್ರಮವನ್ನು ಡಿ.23 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಸಂತ ಫಿಲೋಮಿನಾ ಬಾಲಕಿಯರ ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿದೆ.

ಕಂದಾಯ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆ, ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರು ಹಾಗೂ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ. ಶಾಸಕ ಸ್ವರೂಪ್ ಪ್ರಕಾಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆಂದು ಪ್ರಕಟಣೆ ತಿಳಿಸಿದೆ.

ಕಟ್ಟಡ ನಿರ್ಮಾಣಕ್ಕೆ ಶಾಲಾ ಮಕ್ಕಳ ಬಳಕೆ: ಆಕ್ರೋಶ

• ಪ್ರಜೋದಯ ವರದಿ

ಹೊಳೆನರಸೀಪುರ: ಪಟ್ಟಣದ ಸ್ವರ್ಣ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಶಾಲಾ ಮಕ್ಕಳಿಂದ ಕಟ್ಟಡ ನಿರ್ಮಾಣಕ್ಕಾಗಿ ಇಟ್ಟಿಗೆ ಹೊತ್ತೊಯ್ಯುವ ಕೆಲಸ ಮಾಡಿಸುತ್ತಿದ್ದ ವೀಡಿಯೋ ವೈರಲ್ ಆಗಿದ್ದು, ಆಕ್ರೋಶಕ್ಕೆ ಕಾರಣವಾಗಿದೆ.

ಮಕ್ಕಳನ್ನು ಕಟ್ಟಡ ಕಾರ್ಮಿಕರಂತೆ ಸಮವಸ್ತ್ರದಲ್ಲೇ ದುಡಿಸಿಕೊಳ್ಳುತ್ತಿದ್ದ ವೀಡಿಯೋ ಸಹಿತ ಕರವೇ ಕಾರ್ಯಕರ್ತರು ಬಿಇಒಗೆ ದೂರು ನೀಡಿದ್ದು, ತಹಸೀಲ್ದಾರ್ ರೇಣುಕುಮಾರ್, ಬಿಇಒ ಸೋಮಲಿಂಗೇಗೌಡ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ವಿವರಣೆ ಕೇಳಿ ಶಾಲಾ ಆಡಳಿತ ಮಂಡಳಿಗೆ ನೋಟಿಸ್ ನೀಡಿದ್ದಾರೆ.

ಶಾಲಾ ವಿಸ್ತರಣದ ಮೇಲಂತಸ್ತಿನ ಕಟ್ಟಡ ನಿರ್ಮಾಣ ನಡೆದಿದೆ. ಶಾಲಾ ಸಮವಸ್ತ್ರದಲ್ಲಿದ್ದ ವಿದ್ಯಾರ್ಥಿಗಳು ಬುಧವಾರ ಮದ್ಯಾಹ್ನ ಸಿಮೆಂಟ್



ವಿವರಣೆ ಕೇಳಿ ನೋಟೀಸ್

ಕರವೇ

ಹೋರಾಟಗಾರರ ಮೇಲೆ ದ್ವೇಷ ಪೂರಿತ ಪ್ರಕರಣ

» ಮೊದಲನೇ ಪುಟದಿಂದ

ಗ್ಯಾರಂಟಿಗಳ ಕುರಿತು ಯಾವುದೇ ಸ್ಪಷ್ಟತೆ ಇಲ್ಲ ಎಂದು ಹೇಳಿದರು.

ಸೆಕ್ಷನ್-4 ಎಂಬಭೂತವನ್ನು ಮುಂದಿಟ್ಟುಕೊಂಡು ಹಾನುಬಾಳು ಹೋಬಳಿಯ ನೂರಾರು ಕುಟುಂಬ ಗಳನ್ನು ಒಕ್ಕಲೆಬ್ಬಿಸುವ ಕಾರ್ಯವನ್ನು ಅಧಿಕಾರಿಗಳು ಹಾಗು ಸರ್ಕಾರ ತಕ್ಷಣವೇ ನಿಲ್ಲಿಸಬೇಕು. ಸಂಪೂರ್ಣ ಕಂದಾಯ ಭೂಮಿಯಾಗಿರುವ ಈ ಜಾಗದಲ್ಲಿ ಅರಣ್ಯ ಇಲಾಖೆ ಸೆಕ್ಷನ್-4 ಹೆಸರಿನಲ್ಲಿ ವಿನಾಃ ಕಾರಣ ತೊಂದರೆ ನೀಡುವುದನ್ನು ನಿಲ್ಲಿಸಬೇಕೆಂದು ಒತ್ತಾಯಿಸಿದರು.

ಮುಂಬರುವ ಸ್ಥಳೀಯ ಆಡಳಿತ ಚುನಾವಣೆಗೆ ಸಂಬಂಧಿಸಿದಂತೆ ಚುನಾವಣಾ ಮೈತ್ರಿಯ ಬಗ್ಗೆ ಇನ್ನೂ ಪಕ್ಷದ ವರಿಷ್ಠರು ಯಾವುದೇ ತೀರ್ಮಾನ ಕೈಗೊಂಡಿಲ್ಲ. ಸದ್ಯಕ್ಕೆ ಜೆಡಿಎಸ್ ಪಕ್ಷ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು ಮುನ್ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಎರಡು ಪಕ್ಷಗಳ ವರಿಷ್ಠರು ತೆಗೆದುಕೊಳ್ಳುವ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಬೇಕೆಂದು ಹೇಳಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಜಾತಹಳ್ಳಿ ಪುಟ್ಟಸ್ವಾಮಿಗೌಡ, ಪುರಸಭೆ ಮಾಜಿ ಅಧ್ಯಕ್ಷ ಕಾಡಪ್ಪ, ಮಲ್ಲಾಡ್ ಜಾಕೀರ್, ಬಿರಡಹಳ್ಳಿ ಪಂಚಾಯಿತಿ ಮಾಜಿ ಅಧ್ಯಕ್ಷ ಎಸ್.ಡಿ.ಸತೀಶ್, ಸಚಿನ್‌ಪ್ರಸಾದ್, ಕುಮಾರಸ್ವಾಮಿ, ಭಾಸ್ಕರ್ ಇದ್ದರು.

ಸರ್ಕಾರಿ ಆಸ್ಪತ್ರೆಯ ಉಪಕರಣಗಳು ಮಾಯ

24 ಲಕ್ಷ ರೂ. ವೆಚ್ಚದ ಸಾಮಾಗ್ರಿ ಕಾಣೆ । ನೋಟೀಸ್‌ಗಷ್ಟೇ ಸೀಮಿತವಾದ ವಿಚಾರಣೆ

• ಪ್ರಜೋದಯ ವರದಿ

ಬೇಲೂರು: ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿದ್ದ 24 ಲಕ್ಷ ರೂ. ಮೊತ್ತದ ಬೆಲೆ ಬಾಳುವ ವೈದ್ಯಕೀಯ ಉಪಕರಣಗಳು ಮಾಯವಾಗಿದ್ದೂ ಆಡಳಿತಾಧಿಕಾರಿಗಳು ಗೊತ್ತಿಲ್ಲದವರಂತೆ ವರ್ತಿಸುತ್ತಿದ್ದಾರೆಂಬ ಆರೋಪ ಕೇಳಿಬಂದಿದೆ.

ಸ್ಕ್ಯಾನಿಂಗ್ ಮಿಷನ್, ವೆಂಟಿಲೇಟರ್ ಮಾನಿಟರ್, ಆಕ್ಸಿಜನ್ ಸಿಲೆಂಡರ್‌ಗಳು ಕಳುವಾಗಿವೆ. ಕಳ್ಳತನದ ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಯೊಬ್ಬರು ಸಿಸಿಟಿವಿ ಕ್ಯಾಮರಾ ಪರಿಶೀಲಿಸುವ ವೇಳೆ ವಿಚಾರ ತಿಳಿದಿದ್ದು ಖಾಸಗಿ ಆ್ಯಂಬುಲೆನ್ಸ್ ಚಾಲಕ ಸುಫಿಯಾನ್ ಎಂಬಾತ ವಿಡಿಯೋದಲ್ಲಿ ಇರುವುದು ಎಂದು ತಿಳಿದುಬಂದಿದೆ. ಆದರೆ, ಆತನ ವಿರುದ್ಧ ಕ್ರಮ ಕೈಗೊಳ್ಳಬೇಕಿದ್ದ ಅಧಿಕಾರಿಗಳು ಜಾಣ ಮೌನ ವಹಿಸಿದ್ದಾರೆಂದು ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆಸ್ಪತ್ರೆಯಲ್ಲಿದ್ದ 6 ಲಕ್ಷ ರೂ. ಬೆಲೆ ಬಾಳುವ ಸ್ಕ್ಯಾನಿಂಗ್ ಮಷಿನ್, 5ಕ್ಕೂ ಹೆಚ್ಚು ವೆಂಟಿಲೇಟರ್ ಮಾನಿಟರ್‌ಗಳು ಹಾಗು 10ಕ್ಕೂ ಹೆಚ್ಚು ಆಕ್ಸಿಜನ್ ಸಿಲಿಂಡರ್‌ಗಳು ಕಾಣೆಯಾಗಿವೆ ಎಂದು ಕರವೇ ತಾಲ್ಲೂಕು ಅಧ್ಯಕ್ಷ ಚಂದ್ರಶೇಖರ್ ಆರೋಪಿಸಿದರು.

ತಾಲ್ಲೂಕಿನ ಬಡವರಿಗೆ ಅನುಕೂಲವಾಗಲೆಂದು ಸರ್ಕಾರದಿಂದ ಉಪಕರಣಗಳನ್ನು ನೀಡಿದ್ದರೆ ಅಧಿಕಾರಿಗಳು ಅಕ್ರಮದಲ್ಲಿ ಶಾಮೀಲಾಗಿ ಖಾಸಗಿ ಆ್ಯಂಬುಲೆನ್ಸ್ ಚಾಲಕನ ಸಹಾಯದಿಂದ ಕಳ್ಳತನದಲ್ಲಿ ಭಾಗಿಯಾಗಿದ್ದಾರೆ. ತಾಲ್ಲೂಕಿನ ಜನರ ಉಪಯೋಗಕ್ಕಾಗಿ ಹೋರಾಟ ಮಾಡಿದ್ದಕ್ಕೆ ಸ್ಕ್ಯಾನಿಂಗ್ ಮಷಿನ್ ಮಂಜೂರಾಗಿತ್ತು ಎಂದರು.

ಕಳ್ಳತನ ಆರೋಪಿಗೆ ನೆಪಮಾತ್ರಕ್ಕೆ ನೋಟೀಸ್ ಜಾರಿ ಮಾಡಿ ಪ್ರಕರಣ ಮುಚ್ಚಿ ಹಾಕುವ ಹುನ್ನಾರ ನಡೆದಿದೆ. ತಪ್ಪಿತಸ್ಥರ ಅಧಿಕಾರಿಗಳ ವಿರುದ್ಧವೂ ಕ್ರಮ ಜರುಗಿಸಬೇಕು. ಇಲ್ಲವಾದರೆ ಹೋರಾಟ ತೀವ್ರಗೊಳಿಸಲಾಗುವುದೆಂದು ಅವರು ಎಚ್ಚರಿಕೆ ನೀಡಿದರು.

ಚಾಲಕರ ವಿರುದ್ಧ ಕ್ರಮಕ್ಕೆ ಆಗ್ರಹ

ಪಟ್ಟಣದಲ್ಲಿ ಸರ್ಕಾರಿ ಆ್ಯಂಬುಲೆನ್ಸ್‌ಗಳಿದ್ದರೂ ಖಾಸಗಿಯವರ ಆರ್ಭಟ ಮಿತಿಮೀರಿದೆ. ಹಣದಾಸೆಗೆ ಖಾಸಗಿಯವರಿಗೆ ರೋಗಿಗಳನ್ನು ಕರೆತರುವ ಹಾಗು ವಾಪಾಸ್ ಕಳಿಸುವ ಸಂಪ್ರದಾಯ ಬೆಳೆಸಿಕೊಂಡಿದ್ದಾರೆ. ಸರ್ಕಾರಿ ಆಸ್ಪತ್ರೆಗೆ ರೋಗಿಗಳನ್ನು ಕರೆದುಕೊಂಡು ಬರುವ ಬದಲು ಖಾಸಗಿ ಆಸ್ಪತ್ರೆ ಜೊತೆ ಒಳ ಒಪ್ಪಂದ ಮಾಡಿಕೊಂಡು ಅಲ್ಲಿಗೆ ಕರೆದೊಯ್ಯುತ್ತಾರೆ. ಚಾಲಕರ ಹಣದಾಹಕ್ಕೆ ಬಡ ರೋಗಿಗಳು ಕಣ್ಣೀರು ಸುರಿಸುವಂತಾಗಿದೆಯೆಂದು ಚಂದ್ರಶೇಖರ್ ಆರೋಪಿಸಿದರು.

ಕರವೇ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಖಾದರ್ ಅವರು ಮಾತನಾಡಿ, ಬೇಲೂರು ಸರ್ಕಾರಿ ಆಸ್ಪತ್ರೆಯ ಸಮಸ್ಯೆಗಳು ಹಲವು ವರ್ಷಗಳಿಂದ ಇವೆ. ಜನರ ಪರವಾಗಿ ಕರವೇ ಹೋರಾಟ ನಡೆಸುತ್ತಲೇ ಇದೆ. ಜನರಿಗೆ ಉಪಯೋಗವಾಗಬೇಕಿದ್ದ ಸ್ಕ್ಯಾನಿಂಗ್ ಮಿಷನ್ ಕಳ್ಳತನವಾಗಿದ್ದರೂ ಅಧಿಕಾರಿಗಳು ಮೌನವಾಗಿರುವುದು ಅನುಮಾನ ಹುಟ್ಟಿಸಿದೆ ಎಂದರು.

ಕರವೇ ಗೌರವಾಧ್ಯಕ್ಷ ಜಗದೀಶ್, ತಾಲ್ಲೂಕು ಯುವ ಘಟಕ ಅಧ್ಯಕ್ಷ ಮೋಹನ್ ಗೌಡ, ಮಾಧ್ಯಮ ಸಲಹೆಗಾರ ದಿನೇಶ್ ಬೆಳ್ಳಾವರ, ಪ್ರಗತಿ ಲೋಕೇಶ್ ಹಾಗು ಇತರರಿದ್ದರು.

ಮಹಿಳೆಯರು ಆರೋಗ್ಯ ನಿರ್ಲಕ್ಷ್ಯ ಮಾಡಬೇಡಿ

• ಪ್ರಜೋದಯ ವರದಿ

ಹಾಸನ: ಮಹಿಳೆಯರು ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ವಹಿಸದೆ ವೈದ್ಯರಿಂದ ಅಗತ್ಯ ಚಿಕಿತ್ಸೆ ಹಾಗು ಸಲಹೆ ಪಡೆಯಬೇಕೆಂದು ಡಾ|| ಬಿ.ಕೆ. ಸೌಮ್ಯಮಣಿ ಅವರು ಹೇಳಿದರು.

ನಗರದ ಮಲೆನಾಡು ತಾಂತ್ರಿಕ ಕಾಲೇಜಿನ ಅಲ್ಯುಮ್ನಿ ಸಭಾಂಗಣದಲ್ಲಿ ಶುಕ್ರವಾರ ಕಾಲೇಜಿನ ಮಹಿಳಾ ಸಬಲೀಕರಣ ವಿಭಾಗದಿಂದ ಏರ್ಪಡಿಸಿದ್ದ ಮಹಿಳೆಯರಿಗೆ ಆರೋಗ್ಯ ಶಿಬಿರ ಉದ್ಘಾಟಿಸಿ ಮಾತನಾಡಿ, ಒತ್ತಡದಲ್ಲೇ ಕಾಲ ಕಳೆಯುವ ಸ್ತ್ರೀಯರು ಆರೋಗ್ಯವನ್ನು ಸಂಪೂರ್ಣ ನಿರ್ಲಕ್ಷಿಸುತ್ತಾರೆ. ಹೀಗಾಗಿ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಆರೋಗ್ಯ ಕಾಪಾಡಿ ಕೊಳ್ಳುವುದು ಎಲ್ಲರ ಆದ್ಯತೆಯಾಗಬೇಕೆಂದರು.

ಪ್ರಾಂಶುಪಾಲ ಡಾ. ಅಮರೇಂದ್ರ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾಲೇಜಿನಲ್ಲಿ ಮಹಿಳಾ ನೌಕರರಿಗೆ ಮಹಿಳಾ ಸಬಲೀಕರಣ ವಿಭಾಗದವರು ಆರೋಗ್ಯ ತಪಾಸಣೆ ಮಾಡಿಸುತ್ತಿರುವುದು ಒಳ್ಳೆಯ ಕೆಲಸವೆಂದರು.

ಗರ್ಭ ಕೊರಳ ಕ್ಯಾನ್ಸರ್, ಮೂಳೆಗಳಲ್ಲಿ ಕ್ಯಾಲ್ಸಿಯಂ ಮತ್ತು ಖನಿಜ ತಪಾಸಣೆ, ಸ್ತನ ಕ್ಯಾನ್ಸರ್, ರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆ, ರಕ್ತದಲ್ಲಿ ಕೆಂಪು ರಕ್ತಕಣ, ಮಧುಮೇಹದಂತಹ ಕಾಯಿಲೆಗಳಿಗೆ ತಕ್ಷಣವೇ ವೈದ್ಯರನ್ನು ಭೇಟಿಯಾಗಬೇಕು. ಆರೋಗ್ಯ ಶಿಬಿರದಲ್ಲಿ ಪಾಲ್ಗೊಳ್ಳುವ ಮೂಲಕ ಜೀವನ ಪದ್ಧತಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕೆಂದರು.

ಕಾರ್ಯಕ್ರಮ ಸಂಯೋಜಕಿ ಡಿ.ಎಸ್. ಅಮೃತಾ, ಸಹ ಪ್ರಾಧ್ಯಾಪಕಿ ಎಸ್.ಕೆ.ಯೋಗಿತಾ, ರಿಜಿಸ್ಟ್ರಾರ್ ಕುಮುದ, ಎನ್‌ಎಸ್‌ಎಸ್ ಅಧಿಕಾರಿ ವಿಜಯಕುಮಾರ್, ಕಟ್ಟಾಯ ಶಿವಕುಮಾರ್, ರೋಟರಿ ಅಧ್ಯಕ್ಷ ಸಿದ್ದೇಶ್, ಮಮತಾ ಪಾಟೀಲ್, ಬೆಂಗಳೂರಿನ ದಿವಾಕಸ್ ಸ್ಪೆಷಾಲಿಟಿ ಆಸ್ಪತ್ರೆಯ ಡಾ|| ಕಾವೇರಿ, ಸಿಬ್ಬಂದಿ ಜವರಯ್ಯ ಹಾಗು ಇತರರು ಭಾಗವಹಿಸಿದ್ದರು.

ಉರ್ದು ಅಕಾಡೆಮಿ ಅನುದಾನ ಹೆಚ್ಚಿಸಲು ಆಗ್ರಹ

• ಪ್ರಜೋದಯ ವರದಿ

ಹಾಸನ: ಉರ್ದು ಅಕಾಡೆಮಿಗೆ ರಾಜ್ಯ ಸರ್ಕಾರ ನೀಡುತ್ತಿರುವ ವಾರ್ಷಿಕ ಅನುದಾನವನ್ನು ಹೆಚ್ಚಿಸಬೇಕೆಂದು ರಾಜ್ಯ ಉರ್ದು ಅಕಾಡೆಮಿ ಅಧ್ಯಕ್ಷ ಮೌಲಾನ ಮುಫ್ತಿ ಮೊಹಮ್ಮದ್ ಆಲಿ ಖಾಜಿ ಅವರು ಆಗ್ರಹಿಸಿದರು.

ನಗರದ ತಾಜ್ ಸಮುದಾಯ ಭವನದಲ್ಲಿ ಕರ್ನಾಟಕ ಉರ್ದು ಅಕಾಡೆಮಿ ವತಿಯಿಂದ ಆಯೋಜಿಸಿದ್ದ ಉರ್ದು ಕವಿಗೋಷ್ಠಿಯಲ್ಲಿ ಮಾತನಾಡಿ, ಸರ್ಕಾರ ಪ್ರತಿ ವರ್ಷ ಕೇವಲ 2 ಕೋಟಿ ರೂ. ನೀಡುತ್ತಿದೆ. ಆದರಿಂದ ಹೆಚ್ಚು ಕಾರ್ಯಕ್ರಮ ಆಯೋಜಿಸಲು ಸಾಧ್ಯವಾಗುತ್ತಿಲ್ಲ. ದಾನಿಗಳ ನೆರವಿನಿಂದ ಸಣ್ಣ ಪುಟ್ಟ ಕಾರ್ಯಕ್ರಮಗಳನ್ನು ಅಕಾಡೆಮಿ ವತಿಯಿಂದ ಮಾಡಲಾಗುತ್ತಿದೆ. ಸರ್ಕಾರ ಗಮನ ಹರಿಸಿ ಅಕಾಡೆಮಿಗೆ ಹೆಚ್ಚಿನ ಅನುದಾನ ನೀಡಬೇಕು. ಹಾಗಾದರೆ ತಾಲ್ಲೂಕು ಮಟ್ಟದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲು ಸಾಧ್ಯವಾಗುತ್ತದೆಂದರು.

ಕರ್ನಾಟಕ ರಾಜ್ಯ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ. ಮದನಗೌಡ ಅವರು ಮಾತನಾಡಿ, ಭಾಷೆ ಮತ್ತು ಕಾವ್ಯಕ್ಕೆ ಯಾವ ಮತ್ಸರವಿಲ್ಲ. ಸಾಹಿತ್ಯಕ್ಕೆ ಯಾವ ಗಡಿಗಳಿಲ್ಲ. ಭಾಷೆಯ ಬೆಳವಣಿಗೆಗೆ ಇಂತಹ ಕಾರ್ಯಕ್ರಮಗಳು ಸಹಕಾರಿಯಾಗಿದೆ. ಇತ್ತೀಚಿನ ವರ್ಷ ಗಳಲ್ಲಿ ಉರ್ದು ಶಾಲೆಗಳಿಗೆ ಮಕ್ಕಳ ದಾಖಲಾತಿಯಲ್ಲಿ ಇಳಿಕೆಯಾಗುತ್ತಿರುವುದನ್ನು ಕಾಣ ಬಹುದು. ಆದರಿಂದ ಹಲವು ಉರ್ದು ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗಿ ಶಾಲಾ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದೆ. ಹೀಗಾಗಿ ಉರ್ದು ಶಾಲೆಗಳಿಗೆ ಮಕ್ಕಳನ್ನು ದಾಖಲಾತಿ ಮಾಡಲು ಪೋಷಕರು ಮುಂದಾಗಬೇಕು. ಉರ್ದು ಕವಿಗೋಷ್ಠಿಗಳು ಪ್ರತಿ ತಾಲ್ಲೂಕು ಮಟ್ಟದಲ್ಲಿ ನಡೆಯಬೇಕು, ಆಗ ಮಾತ್ರ ಭಾಷೆಯ ಬೆಳವಣಿಗೆ ಸಾಧ್ಯವೆಂದರು.

ಪತ್ರಕರ್ತ ಜಮೀಲ್ ಅಹಮ್ಮದ್, ಸರ್ಕಾರಿ ಶಾಲೆ ಶಿಕ್ಷಕಿ ಮುಬೀನಾ ಕೌಸರ್ ಅವರನ್ನು ಅಕಾಡೆಮಿ ವತಿಯಿಂದ ಸನ್ಮಾನಿಸಲಾಯಿತು. ರಾಜ್ಯ, ಹೊರ ರಾಜ್ಯ ಹಾಗು ಜಿಲ್ಲೆಯ ಹಲವಾರು ಕವಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಉರ್ದು ಅಕಾಡೆಮಿ ಜಿಲ್ಲಾ ಮುಖಂಡರಾದ ಅನ್ವರ್ ಖಾನ್, ಡಾ.ಅಖ್ತರ್ ಸೈಯ್ಯದ ಖಾನಮ್, ಸಯ್ಯದ್ ಸಜ್ಜದ್ ಪಾಷಾ, ಅತಿಕ್ ಉರ್ ರೆಹಮಾನ್, ಕಾರ್ಯದರ್ಶಿ ನಿಜಾ ಮುದ್ದೀನ್ ಶಾದಾಬ್, ಸೈಯದ್ ತಾಜ್, ಜಲೀಲ್ ಅಹ್ಮದ್, ಮೊಹ್ಮದ್ ಇಸಾಖ್, ಇಬ್ರಾಹಿಂ, ಆಜಾಂ ಖಾನ್, ಅಬ್ದುಲ್ ಮಾಜಿದ್ ಸೇರಿ ಇತರರು ಹಾಜರಿದ್ದರು.

ಆರು ದಶಕವಾದರೂ ಈಡೇರದ ವಿಮಾನ ನಿಲ್ದಾಣ ಕನಸು

» ಮೊದಲನೇ ಪುಟದಿಂದ

ಆರಂಭಗೊಂಡಿದ್ದರೂ ಕಾಮಗಾರಿ 2021ರಲ್ಲಿ ಆರಂಭವಾಯಿತು. ಕಳೆದ ಎರಡು ವರ್ಷಗಳಿಂದ ಪ್ರಗತಿ ನಗಣ್ಯವಾಗಿದೆ.

1960ರ ದಶಕದಿಂದಲೂ ನಿರೀಕ್ಷೆ

ಹಾಸನ ವಿಮಾನ ನಿಲ್ದಾಣದ ಮೊದಲ ಪ್ರಸ್ತಾವನೆಯನ್ನು ಕೇಂದ್ರ ಸಾರ್ವಜನಿಕ ಕಾಮ ಗಾರಿಗಳ ಇಲಾಖೆ 1960ರಲ್ಲಿ ಸಿದ್ಧ ಪಡಿಸಿತ್ತು. 1966ರ ನವೆಂಬರ್‌ನಲ್ಲಿ ಸಹಾಯಕ ಆಯುಕ್ತರು 31 ಎಕರೆ 31 ಗುಂಟೆ ಖಾಸಗಿ ಭೂಮಿ ಹಾಗು 58 ಎಕರೆ ಸರ್ಕಾರಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡರು. 1971ರಲ್ಲಿ ಎರಡನೇ ಹಂತದಲ್ಲಿ ಮತ್ತೆ 12 ಎಕರೆ ಖಾಸಗಿ ಭೂಮಿ ಮತ್ತು 42 ಎಕರೆ ಸರ್ಕಾರಿ ಭೂಮಿಯನ್ನು ಪಡೆದರು. ಆದರೂ ದಶಕಗಳ ಕಾಲ ಯೋಜನೆ ಪೂರ್ಣ ಹಂತ ತಲುಪಲೇ ಇಲ್ಲ.

ಖಾಸಗಿ ಪಾಲುದಾರಿಕೆ ಪ್ರಯತ್ನ ವಿಫಲ

ಜೆಡಿಎಸ್-ಬಿಜೆಪಿ ಮೈತ್ರಿ ಸರ್ಕಾರದ ಅವಧಿಯಲ್ಲಿ ಯೋಜನೆಗೆ ಮತ್ತೆ ಚೈತನ್ಯ ದೊರಕಿತು. 2007ರಲ್ಲಿ ಮಾಜಿ ಪ್ರಧಾನಿ ಹಾಗು ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡ ಅವರು ಹಾಸನ ಗ್ರೀನ್‌ಫೀಲ್ಡ್ ಕಾರ್ಗೋ ಏರ್‌ಫೀಲ್ಡ್ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿದರು. ಜ್ಯುಪಿಟರ್ ಏವಿಯೇಷನ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯೊಂದಿಗೆ ಒಪ್ಪಂದವೂ ನಡೆಯಿತು. ಇದೇ ಅವಧಿಯಲ್ಲಿ ಆರಂಭಗೊಂಡ ಶಿವಮೊಗ್ಗಾ ವಿಮಾನ ನಿಲ್ದಾಣ 2023ರಿಂದ ಕಾರ್ಯ ನಿರ್ವಹಿಸುತ್ತಿದೆ. ಆದರೆ, ಹಾಸನ ಯೋಜನೆ ಮಾತ್ರ ಮುಂದೆ ಸಾಗಲಿಲ್ಲ.

ನಂತರ ನಡೆದ ಪ್ರಕ್ರಿಯೆಯಲ್ಲಿ 960 ಎಕರೆ ಭೂಮಿ ಸಂಪೂರ್ಣವಾಗಿ ಹಸ್ತಾಂತರಿಸುವವರೆಗೆ ಕಾಮಗಾರಿ ಆರಂಭಿಸಲಾಗುವುದಿಲ್ಲ ಎಂದು ಖಾಸಗಿ ಸಂಸ್ಥೆ ನಿರಾಕರಿಸಿತು. 2018ರಲ್ಲಿ ಜೆಡಿಎಸ್-ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಖಾಸಗಿ ಸಂಸ್ಥೆಯೊಂದಿಗೆ ಮಾಡಿಕೊಂಡ ಒಪ್ಪಂದವನ್ನು ರದ್ದುಗೊಳಿಸಿತು.

ಕಳಪೆ ಕಾಮಗಾರಿ: 7 ತಿಂಗಳಿಗೆ ಕಿತ್ತು ಬಂದ ಡಾಂಬರು

• ಪ್ರಜೋದಯ ವರದಿ

ಹಳೇಬೀಡು: ಇಲ್ಲಿನ ಕರಿಯಮ್ಮ ಬೀದಿ ಹಾಗು ಬ್ರಾಹ್ಮಣರ ಬೀದಿಯ ರಸ್ತೆಗಳಲ್ಲಿ ಡಾಂಬರಿ ಕರಣ ಮುಗಿದು 7 ತಿಂಗಳಲ್ಲಿ ಡಾಂಬರು ಕಿತ್ತು ರಸ್ತೆ ಸಂಪೂರ್ಣ ಗುಂಡಿಮಯವಾಗಿದ್ದು ಕಳಪೆ ಕಾಮಗಾರಿಗೆ ನೈಜ ಸಾಕ್ಷಿಯಾಗಿದೆ.

ಈ ರಸ್ತೆಗಳು ಜನವಸತಿ ಪ್ರದೇಶವನ್ನು ಹೊಂದಿವೆ. ರಸ್ತೆಯಲ್ಲಿ ಶಾಲಾ-ಕಾಲೇಜುಗಳಿವೆ. ಗ್ರಾಮ ದೇವತೆ ಕರಿಯಮ್ಮ ದೇವಾಲಯಕ್ಕೆ ನಿತ್ಯ ನೂರಾರು ಭಕ್ತರು ಬರುತ್ತಿದ್ದು ಗುಂಡಿ ಬಿದ್ದ ರಸ್ತೆಗಳೇ ಅವರನ್ನು ಸ್ವಾಗತಿಸುತ್ತಿವೆ. ಮುತ್ತಿನ ವೀರಭದ್ರಸ್ವಾಮಿ, ಕುಂಬಳೇಶ್ವರ ಹಾಗು ಕಸ್ತೂರಿ, ರಂಗನಾಥ ಸ್ವಾಮಿ ಎಂಬ ಹೊಯ್ಸಳರ ಕಾಲದ ದೇವಾಲಯಗಳು ರಸ್ತೆಯಲ್ಲಿವೆ. ಪ್ರವಾಸೋದ್ಯಮ ಇಲಾಖೆಯಿಂದ ಪ್ರಚಾರ ಕೈಗೊಂಡು ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಸದುದ್ದೇಶ ಇದೆ. ಯೊನೆಸ್ಕೊದವರು ಹಲವಾರು ಬಾರಿ ದೇವಾಲಯಗಳ ವೀಕ್ಷಣೆ ಮಾಡಿದ್ದಾರೆ. ಆದರೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಪ್ರಮುಖವಾದ ರಸ್ತೆಯಲ್ಲಿ ಕಳಪೆ ಕಾಮಗಾರಿ ಕೈಗೊಂಡಿದ್ದಾರೆಂದು ಬಸವೇಶ್ವರ ಬಳಗದ ಅಧ್ಯಕ್ಷ ಹೆಚ್.ಸಿ.ಚೇತನ್ ಅವರು ದೂರಿದ್ದಾರೆ.

ಬೇಲೂರು ಮುಖ್ಯ ರಸ್ತೆಯಿಂದ ಬ್ರಾಹ್ಮಣರ ಬೀದಿ ಪ್ರವೇಶದಲ್ಲಿ 100 ಮೀಟರ್ ರಸ್ತೆ ಕಾಮಗಾರಿ ಮಾಡಿಲ್ಲ. ಕಾಲಕ್ರಮೇಣ ರಸ್ತೆಗೆ ಡಾಂಬರು ಹಾಕಿದ ಅವಶೇಷ ಇಲ್ಲದಂತೆ ಕಿತ್ತು ಹೋಗುವ ಸಾಧ್ಯತೆ ಇದೆ. ಕಾಮಗಾರಿಗೆ ಮಂಜೂರಾದ 1 ಕೋಟಿ ರೂ. ಅನಗತ್ಯ ವೆಚ್ಚವಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಲೋಕೋಪಯೋಗಿ ಇಲಾಖೆಯವರು ರಸ್ತೆ ಸರಿಪಡಿಸಿ, ಜನರ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕೆಂದು ವಾರ್ಡ್ ಸದಸ್ಯ ಹೆಚ್. ಎಂ.ನಿಂಗಪ್ಪ ಅವರು ಆಗ್ರಹಿಸಿದ್ದಾರೆ.

ಈ ಕುರಿತು ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಕೃಷ್ಣೇಗೌಡ ಮಾತನಾಡಿ, ನಾನು ಬೇಲೂರು ತಾಲ್ಲೂಕಿಗೆ ಬರುವ ಮೊದಲೇ ಕಾಮಗಾರಿ ಮುಗಿದಿದೆ. ಶೀಘ್ರದಲ್ಲಿಯೇ ಸ್ಥಳ ಪರಿಶೀಲನೆ ನಡೆಸುತ್ತೇನೆಂದರು.

ಬಾಲ್ಯ ವಿವಾಹ ನಿಷೇಧಿಸುವುದು ಎಲ್ಲರ ಕರ್ತವ್ಯ

• ಪ್ರಜೋದಯ ವರದಿ

ಹಾಸನ: ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಕಾನೂನಿನ ಬಗ್ಗೆ ಅರಿವು ಮೂಡಿಸುವುದು, ಕಾನೂನಿನ ನೆರವು ಮತ್ತು ಸೇವೆಗಳನ್ನು ಎಲ್ಲರಿಗೂ ತಲುಪಿಸುವುದು ಬಾಲ್ಯ ವಿವಾಹವನ್ನು ನಿಷೇಧಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ದ್ರಾಕ್ಷಾಯಿಣಿ ಅವರು ತಿಳಿಸಿದ್ದಾರೆ.

ತಾಲ್ಲೂಕಿನ ಐದಳ ಕಾವಲು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಬಾಲ್ಯ ವಿವಾಹ ನಿಷೇಧ ಅರಿವು, ಬೇಟಿ ಬಚಾವೋ ಬೇಟಿ ಪಡಾವೋ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲರೂ ಕಾನೂನಿನ ಚೌಕಟ್ಟಿನೊಳಗೆ ನಡೆದುಕೊಂಡರೆ ಉತ್ತಮ ನಾಗರೀಕ ಸಮಾಜ ನಿರ್ಮಾಣ ಮಾಡಲು ಸಾಧ್ಯವೆಂದು ತಿಳಿಸಿದ್ದಾರೆ.

ಶಿಶು ಅಭಿವೃದ್ಧಿ ಯೋಜನಾಧಿ